ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 19 ಮೇ 8, 1983 ಬೆಲೆ 60 ಪೈಸೆ

ಪಂಚಾಯತ್ ಚುನಾವಣೆಗೆ ಸಿದ್ಧವಾಗುತ್ತಿರುವ ಪಶ್ಚಿಮ ಬಂಗಾಳ

ಇದೇ ತಿಂಗಳ 31 ರಂದು ಪಶ್ಚಿಮಬಂಗಾಳ ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳು ನಡೆಯಲಿವೆ. 1978 ರಲ್ಲಿ ಎಡರಂಗ ಸರ್ಕಾರ ಅಧಿಕಾರ ವಹಿಸಿಕೊಂಡ ಒಂದು ವರ್ಷದ ನಂತರ ಪಂಚಾಯತ್ ಚುನಾವಣೆಗಳನ್ನು ನಡೆಸಲಾಗಿತ್ತು. ಎಡರಂಗ ಸರ್ಕಾರದ ಈ ಸಾಧನೆಯು ಇಡೀ ದೇಶದಲ್ಲೇ ಒಂದು ಅಪೂರ್ವ ಪ್ರಸಂಗ. ಪ. ಬಂಗಾಳದಲ್ಲಿ ಕಾಂಗ್ರೆಸ್ ಆಡಳಿತ ನಡೆಸುತ್ತಿದ್ದ ಕಾಲದಲ್ಲಿ 15 ರಿಂದ 17 ವರ್ಷಗಳಷ್ಟು ದೀರ್ಘಕಾಲದವರೆಗೂ ಪಂಚಾಯತ್ ಚುನಾವಣೆಗಳನ್ನು ನಡೆಸಿಯೇ ಇರಲಿಲ್ಲ.

ರಾಜ್ಯ ಸರ್ಕಾರವು ಕಳೆದ ವರ್ಷವಲ್ಲೇ ಚುನಾವಣೆಯನ್ನು ನಡೆಸಬೇಕಾಗಿತ್ತು. ಆದರೆ ವಿಧಾನಸಭಾ ಚುನಾವಣೆಗಳು ನಡೆಯಬೇಕಾಗಿದ್ದುದರಿಂದಲೂ, ಚುನಾವಣಾ ಆಯೋಗವು ಗ್ರಾಮವಾರು ಬದಲಾಗಿ ಮತಗಟ್ಟೆವಾರು ಮತದಾರರ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದ ಕಾರಣದಿಂದಾಗಿ ಚುನಾವಣೆಯನ್ನು ನಡೆಸಲಾಗಲಿಲ್ಲ.

ಮುಂಬರುವ ಪಂಚಾಯತ್ ಚುನಾವಣೆಗಳು ಈ ವರ್ಷ ಅತ್ಯಂತ ಮಹತ್ವದ ರಾಜಕೀಯ ಘಟನೆಯೆಂಬುದಾಗಿ ಎಡರಂಗದ ಅಧ್ಯಕ್ಷರಾದ ಕಾ| ಸರೋಜ್ ಮುಖರ್ಜಿ ಅವರು ಪತ್ರಿಕಾ ಸಮ್ಮೇಳನದಲ್ಲಿ ವಿವರಿಸಿದರು. ಎಡರಂಗದ ಸಭೆಯ ನಂತರ ಅವರು ಪತ್ರಕರ್ತರೊಡನೆ ಮಾತನಾಡುತ್ತಾ ಕಲ್ಕತ್ತಾ ನಗರ ಮತ್ತು ಮುನಿಸಿಪಲ್ ಟೌನುಗಳನ್ನು ಬಿಟ್ಟು ಇಡೀ ಪ. ಬಂಗಾಳದ್ಯಂತ ಪಂಚಾಯತ್ ಚುನಾವಣೆಗಳು ನಡೆಯುವುದೆಂದೂ ಮತ್ತು ಇದು ಸಾರ್ವತ್ರಿಕ ಚುನಾವಣೆಯಷ್ಟೇ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆಂದು ತಿಳಿಸಿದರು.

ಎಡರಂಗದ ಸಭೆಯಲ್ಲಿ ಎಲ್ಲಾ ಅಂಗಪಕ್ಷಗಳೂ ಕೂಡ ತಮ್ಮೆಲ್ಲಾ ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಐಕ್ಯಮತ್ಯದಿಂದ ಚುನಾವಣೆಯನ್ನು ಎದುರಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಂಡವು. ಚುನಾವಣೆಯಲ್ಲಿ ಎಡರಂಗದ ಪ್ರಮುಖ ಘೋಷಣೆಯೆಂದರೆ : ಗ್ರಾಮೀಣ ಅಭಿವೃದ್ಧಿಯ ಕ್ಷೇತ್ರದಲ್ಲಿ ಪಂಚಾಯತ್‌ಗಳ ಸಾಧನೆಗಳನ್ನು ಸ್ಪಷ್ಟವಾಗಿ ಮುನ್ನಡೆಸಿರಿ.

ಸಿ. ಪಿ. ಐ. (ಎಂ) ಮತ್ತು ಅದರ ಎಡರಂಗದ ಮಿತ್ರ ಪಕ್ಷಗಳು ತೃಪ್ತಿಗೆಎಡೆಕೊಡದೆ ಎಲ್ಲಾ ಸಿದ್ಧತೆಗಳನ್ನು ನಡೆಸತೊಡಗಿದೆ. ಕಾಂಗ್ರೆಸ್ (ಐ) ಅನ್ನು ಒಳಗೊಂಡಂತೆ ವಿರೋಧ ಪಕ್ಷಗಳ ನಿರಾಶೆಯನ್ನು ಅಲಕ್ಷಿಸಲಾಗುವುದಿಲ್ಲ. ಇವರಿಗೆ ಅನುಕೂಲಕರವಾಗಿ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳು ಪ್ರಚಾರ ನಡೆಸುತ್ತಿದೆ.

ಆದರೆ ಜನತೆಯ ದೃಷ್ಟಿ ಅತ್ಯಂತ ನಿಚ್ಚಳವಾಗಿದೆ. ಕಾ| ಸರೋಜ್ ಮುಖರ್ಜಿ ಅವರು ಹೇಳುವಂತೆ ಯಾವುದೇ ಅಪಪ್ರಚಾರಗಳೂ, ಸುಳ್ಳು ವದಂತಿಗಳೂ ಪರಿಣಾಮ ಬೀರಲಾರದಷ್ಟು ಮಟ್ಟಕ್ಕೆ ಎಡರಂಗದ ಸಾಧನೆಗಳು ಕಣ್ಣಿದುರಿಗಿವೆ. ಉದಾಹರಣೆಗೆ 56 ಸಾವಿರ ಪಂಚಾಯತ್ ಸದಸ್ಯರುಗಳಲ್ಲಿ ಕೇವಲ ಕೆಲವೇ ಮಂದಿಯ ವಿರುದ್ಧ ಆಪಾದನೆಗಳಿರಬಹುದು.; ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ತಪ್ಪುಗಳು ಸಂಭವಿಸಿರಬಹುದು. ಆದರೆ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳು, ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ರೇಡಿಯೋ ಮತ್ತು ದೂರದರ್ಶನಗಳು ಈ ಬಗ್ಗೆ ಕುತ್ಸಿತ ಪ್ರಚಾರ ನಡೆಸಿ ಪಂಚಾಯತ್ ಸಂಸ್ಥೆಗಳ ಅಮೂಲ್ಯ ಸಾಧನೆಗಳನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿವೆ.

ಮತ್ತೊಂದು ಕಡೆಯಲ್ಲಿ ಅಭಾವದ ಪರಿಸ್ಥಿತಿಯಿದ್ದಾಗ್ಯೂ ಕಾಂಗ್ರೆಸ್ (ಐ)ನ ಚಿತಾವಣೆಯಿಂದ ಅಗತ್ಯವಿರುವಷ್ಟು ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರ ನಿರಾಕರಿಸುತ್ತಿದೆ. ಆದರೆ ರಾಜ್ಯದಲ್ಲಿ ಈ ಕುರಿತು ಗಲಿಬಿಲಿಯುಂಟಾಗಿಲ್ಲ. ಪಂಚಾಯತ್‌ಗಳು ತಾವು ಪಡೆಯುವ ಆಹಾರ ಧಾನ್ಯಗಳ ಪ್ರಮಾಣವನ್ನು ಜನರಿಗೆ ವಿವರಿಸುತ್ತವೆ ಮತ್ತು ಅದನ್ನು ಜನರಿಗೆ ಹೇಗೆ ವಿತರಣೆ ಮಾಡುತ್ತವೆ ಎಂಬುದನ್ನು ತಿಳಿಸುತ್ತದೆ. ಹಿಂದಿನ ಕಾಂಗ್ರೆಸ್ ಸರ್ಕಾರದಿಂದ ಸಂಪೂರ್ಣ ಭಿನ್ನವಾದ ಸೌಹಾರ್ದಯುತವಾದ ವಿತರಣಾ ನೀತಿ ಜಾರಿಯಲ್ಲಿದೆ. ಇದರಿಂದಾಗಿ ನಗರಕ್ಕೆ ವಲಸೆ ಹೋಗುವುದು ನಿಂತಿದೆ ; ಹಳ್ಳಿಯಿಂದ ಭಿಕ್ಷಾಪಾತ್ರೆ ಹಿಡಿದು ನಗರಕ್ಕೆ ಹೋಗುವವರು ಯಾರೂ ಕಾಣಸಿಗುವುದಿಲ್ಲ.

ಕಳೆದ ಐದು ವರ್ಷಗಳಲ್ಲಿ ಪಶ್ಚಿಮ ಬಂಗಾಳದ ಪಂಚಾಯತ್ತುಗಳು ಮಾಡಿರುವ ಸಾಧನೆ ಇಂಡಿಯಾದಲ್ಲೇ ಅಪೂರ್ವವಾದುದಾಗಿದೆ. ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ಆಹಾರ ಧಾನ್ಯವನ್ನು ಸಮರ್ಪಕವಾಗಿ ಸರಬರಾಜು ಮಾಡಿದ್ದ ಪಕ್ಷದಲ್ಲಿ ಮತ್ತಷ್ಟು ಉತ್ತಮ ಸಾಧನೆಗಳಾಗುತ್ತಿದ್ದವು.

ವಿಶಿಷ್ಟ ದಾಖಲೆ

1981–82ರಲ್ಲಿ 1,222 ಕೋಟಿ ರೂಪಾಯಿಗಳು ಮತ್ತು 43,187 ಟನ್ನುಗಳಷ್ಟು ಗೋಧಿಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ಅಡಿಯಲ್ಲಿ ಸರಬರಾಜು ಮಾಡಲ್ಪಟ್ಟದ್ದರಿಂದಾಗಿ ಪಂಚಾಯತ್ತುಗಳು ಉದ್ಯೋಗದ ಎರಡು ಕೋಟಿ ಮಾನವ ದಿನಗಳನ್ನು ಸೃಷ್ಟಿಸಿ ದಾಖಲೆಯನ್ನು ಸ್ಥಾಪಿಸಿತು. 1982ರ ಸೆಪ್ಟೆಂಬರ್‌ನವರೆಗೆ 16.54 ಕೋಟಿ ರೂಪಾಯಿಗಳು ಹಾಗೂ 20,587 ಟನ್ನುಗಳಷ್ಟು ಗೋಧಿಯನ್ನು ಕೇಂದ್ರ ಸರ್ಕಾರ ಸರಬರಾಜು ಮಾಡಿತ್ತು. ಅದನ್ನು 2 ಕೋಟಿ 26 ಲಕ್ಷ ಮಾನವ

(ಎಂಟನೇ ಪುಟ ನೋಡಿ)

ಸಂಪಾದಕೀಯ :

ಕನಕಪುರ ಚುನಾವಣೆಯ ಮಹತ್ವ

ಮೇ 15 ರಂದು ನಡೆಯಲಿರುವ ಕನಕಪುರದ ಚುನಾವಣೆಗೆ ಚರಿತ್ರಾರ್ಹ ಮಹತ್ವವಿದೆ. ಅದು ಕರ್ನಾಟಕ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ 125 ದಿವಸಗಳ ರಾಮಕೃಷ್ಣ ಹೆಗಡೆಯವರ ಜನತಾ ಸರ್ಕಾರದ ಅಳಿವು-ಉಳಿವಿನ ಪ್ರಶ್ನೆಯಾಗಬಹುದು. ಜನರ ಬೆಂಬಲವಿಲ್ಲದೆ ನಾನು ಒಂದು ಘಳಿಗೆ ಕೂಡ ಅಧಿಕಾರದಲ್ಲುಳಿಯಲಾರೆ ಎಂದು ರಾಮಕೃಷ್ಣ ಹೆಗಡೆಯವರು ಹೇಳುತ್ತಲೇ ಬಂದಿದ್ದಾರೆ. ನುಡಿದಂತೆ ನಡೆಯುವ ವ್ಯಕ್ತಿ ಎಂಬುದನ್ನು ಅವರು ತೋರ್ಪಡಿಸಿದ್ದಾರೆ.

ಮೂವತ್ತೈದು ವರ್ಷ ಅಧಿಕಾರದಲ್ಲಿದ್ದು, ಜನವರಿ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡು ಪಂಚ್ಚರಂತಾಗಿರುವ ಕಾಂಗ್ರೆಸ್ಸಿಗೂ, ಜನತಾ ಅಷ್ಟೇ ಅಲ್ಲ ಅದಕ್ಕಿಂತಲೂ ಹೆಚ್ಚು ಮಹತ್ವಪೂರ್ಣವಾದ ಚುನಾವಣೆಯಿದಾಗಿರಬೇಕು. ಹೆಗಡೆ ಸೋತಲೆ, ಜನತಾ ಸರಕಾರ ಉರುಳುವುದು ಖಾತ್ರಿ. ಅನಂತರ ಮೊಯ್ಲಿ, ಧರ್ಮಸಿಂಗ್‌ರಂಥವರ ಪಾಳಿ. ಆದ್ದರಿಂದ ಹೆಗಡೆಯವರನ್ನು ಸೋಲಿಸಲೇಬೇಕು. ಆ ದಿಸೆಯಲ್ಲಿ ಪ್ರಾರಂಭದಿಂದಲೇ ಸರ್ವಪ್ರಯತ್ನ, ಕಣ್ಣಿಗೆ ಎಣ್ಣೆ ಹಚ್ಚಿ ಚಲನವಲನಗಳ ಈಕ್ಷಣೆ. ಚುನಾವಣಾ ಆಯೋಗಕ್ಕೆ ತಕರಾರುಗಳು. ಸುಳ್ಳು ಆರೋಪಗಳ ಸುರಿಮಳೆ, ಮಟ್ಕಾ ದೊರೆಗಳ ಹಣದ ಸುರಿಮಳೆ—ಸರ್ವಶಕ್ತಿಯ ಉಪಯೋಗ, ಇದರ ಪ್ರಯತ್ನಕ್ಕೆ ಪೂರಕವಾಗಿ ಬಂಗಾರಪ್ಪನವರ ಪಾತ್ರ. ಸಾಧ್ಯವಾದಷ್ಟೂ ಮತ ಕತ್ತರಿಸಿ ಕಾಂಗೈಗೆ ಜಯ ತಂದು ಹೆಗಡೆಯವರ ಸೋಲಿನಲ್ಲಿ ಸಂತೃಪ್ತಿ ಪಡುವ ಈ ಹಿಂದುಳಿದವರ ಮುಂದಾಳು ಕಾಂಗೈಗಳಿಗಿಂತಲೂ ಮುಂದಾಗಿದ್ದಾರೆ. ಬಂಗಾರಪ್ಪನವರ ಕೋಟೆ ಕುಸಿಯುತ್ತಿದೆ. ಆದರೆ ಅಧಿಕಾರ ಲಾಲಸೆ ಮಾತ್ರ ಕುಗ್ಗಿಲ್ಲ.

ಕೆಲವು ಸಲ್ಲದ ಕೃತಿಗಳು ನಡೆದರೂ ಕೂಡ ಒಟ್ಟಾರೆ ಹೆಗಡೆ ಸರ್ಕಾರದ ಆಡಳಿತ ಬಹುಮಟ್ಟಿಗೆ ಜನಪ್ರಿಯವಾಗಿದೆಯೆಂದು ಹೇಳಬಹುದು. ಇದೂ ಬಂಡವಾಳಶಾಹಿ ವರ್ಗದ ಸರ್ಕಾರವೇ ಆಗಿರುವುದರಿಂದ ಎಡ ಸರ್ಕಾರದ ನೀತಿ ನಿಯಮಗಳನ್ನೇ ಅವರು ಅನುಸರಿಸುತ್ತಾರೆಂಬ ಭ್ರಮೆಯನ್ನು ನಾವು ಇಟ್ಟುಕೊಂಡಿಲ್ಲ. ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರತ್ವವನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು, ರೈತ-ಕಾರ್ಮಿಕರ ಹೋರಾಟಗಳನ್ನು ಮುಂದುವರಿಸಲು ಜನತಾ ಸರ್ಕಾರ ಭದ್ರವಾಗಿಳಿಯುವುದು ಅತ್ಯಗತ್ಯ. ಇದರಿಂದ ದಕ್ಷಿಣ ಭಾರತದ ಮೇಲಷ್ಟೇ ಪರಿಣಾಮ ಬೀರವುದಲ್ಲ, ಇಡೀ ಭಾರತದ ರಾಜಕೀಯದ ಮೇಲೆ ಕೂಡ ತೀವ್ರ ಪರಿಣಾಮವುಂಟಾಗುವುದರಲ್ಲಿ ಸಂಶಯವಿಲ್ಲ. ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ಕೇಂದ್ರ–ರಾಜ್ಯ ಸಂಬಂಧದ ಕುರಿತು ವರದಿ ಸಲ್ಲಿಸಲು ಸರ್ಕಾರಿಯಾ ಸಮಿತಿಯನ್ನು ನೇಮಿಸುವಂತೆ ಕೇಂದ್ರದ ಮೇಲೆ ಒತ್ತಾಯ ತರುವಂತಾಯಿತು. ಕಾಂಗೈಯೇತರ ಆಂಧ್ರ–ತಮಿಳುನಾಡು ಸರ್ಕಾರಗಳು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕೃಷ್ಣಾ ನೀರನ್ನು ಮದ್ರಾಸ್ ನಗರಕ್ಕೆ ಒಯ್ಯುವ ಯೋಜನೆ ಒಪ್ಪಿಕೊಂಡು ಅದನ್ನು ಕಾರ್ಯರೂಪದಲ್ಲಿ ತರಲು ನಿರ್ಧರಿಸಿದೆ. ಕರ್ನಾಟಕ, ತಮಿಳುನಾಡು, ಕೇರಳಗಳಿಗೆ ಸಂಬಂಧಪಟ್ಟ ಕಾವೇರಿ ನೀರಿನ ಸಮಸ್ಯೆಯನ್ನು ತಂತಮ್ಮೊಳಗೆ ಚರ್ಚಿಸಿ ಬಗೆಹರಿಸಿಕೊಳ್ಳುವ ನಿರ್ಧಾರ ಮಾಡಿದ್ದಾರೆ. ಈ ರೀತಿ ಕೇಂದ್ರದ ಕೈವಾಡವಿಲ್ಲದೆ ರಾಜ್ಯ ರಾಜ್ಯಗಳೊಳಗಿನ ಸಮಸ್ಯೆಗಳಿಗೆ ಆತಂಕವಿಲ್ಲದೆ ಪರಿಹಾರ ಕಂಡುಹಿಡಿಯಲಾಗುತ್ತಿದೆ. ಇವುಗಳೆಲ್ಲ ದೇಶದ ರಾಜಕೀಯದ ಮೇಲೆ ಒಳ್ಳೇ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ. ಹಾಗಾದರೆ ಇಂದಿರಾಗಾಂಧಿಯ ಕೇಂದ್ರ ಸರ್ಕಾರದ ಪ್ರಭಾವ ಕುಸಿಯುವುದು ನಿಶ್ಚಯ.

ಆದ್ದರಿಂದ ಕರ್ನಾಟಕ ಜನತಾ ಸರಕಾರ ಭದ್ರವಾಗುಳಿಯಬೇಕು. ಅದಕ್ಕಾಗಿ ಕನಕಪುರ ಚುನಾವಣೆಯಲ್ಲಿ ರಾಮಕೃಷ್ಣ ಹೆಗಡೆ ಆರಿಸಿಬರಲೇಬೇಕು. ಅವರ ಯಶಸ್ಸಿಗೆ ಎಲ್ಲರೂ ಪ್ರಯತ್ನ ಮಾಡಲೇಬೇಕು. ಹೆಗಡೆಯವರು ಗೆದ್ದು ಬರಲೆಂದು ಐಕ್ಯರಂಗ ಹಾರೈಸುತ್ತದೆ.

ಕರ್ನಾಟಕ ರಾಜ್ಯದಲ್ಲಿ ಡೊನೇಶನ್ ನಿಶಾಚರ

—ಎನ್ಕೆ

ಶಿಕ್ಷಣರಂಗದಲ್ಲಿ ಡೊನೇಶನ್ ಸಮಸ್ಯೆ ಸರ್ಕಾರವನ್ನೂ ಹಾಗೆಯೇ ಪಾಲಕರನ್ನೂ, ವಿದ್ಯಾರ್ಥಿಗಳನ್ನೂ ಕಾಡುತ್ತಲೇ ಬಂದಿದೆ. ಡೊನೇಶನ್ ತೆಗೆದುಕೊಳ್ಳುವ ಪದ್ಧತಿ ರದ್ದಾಗಬೇಕೆಂದು ಸಾಕಷ್ಟು ಚಳುವಳಿ ನಡೆಯುತ್ತಿದ್ದರೂ ಕೂಡ, ಚುನಾವಣೆಯ ಮುಂಚೆ ಇದರ ಕುರಿತು ಜನತಾ ಪಕ್ಷ ಜನತೆಗೆ ಆಶ್ವಾಸನೆ ಕೊಟ್ಟಿದ್ದರೂ ಕೂಡ, ಈ ಅನಿಷ್ಟ ಪದ್ಧತಿಯನ್ನು ರದ್ದು ಮಾಡಲು ಹೆಗಡೆ ಸರ್ಕಾರ ಕೂಡ ದೃಢ ನಿರ್ಧಾರ ಕೈಗೊಳ್ಳದೆ ಮೀನ ಮೇಷ ಧಾರಣೆ ಮಾಡುತ್ತಿದೆ. ವಿಧಾನಸಭೆಯಲ್ಲಿ ಈ ಪ್ರಶ್ನೆ ಎತ್ತಲ್ಪಟ್ಟಾಗ, ಸಮಗ್ರ ಶಿಕ್ಷಣ ಮಸೂದೆಯೊಂದನ್ನು ಶೀಘ್ರ ತಯಾರಿಸಲಾಗುವುದೆಂದೂ ಅದರಲ್ಲಿ ಡೊನೇಶನ್ ಸಮಸ್ಯೆಗೆ ಪರಿಹಾರ ಸೂಚಿಸಲಾಗುವುದೆಂದೂ ಹೇಳಲಾಗಿತ್ತು.

ಈಗ ಶಿಕ್ಷಣ ಮಂತ್ರಿ ಬಿ. ರಾಚಯ್ಯನವರು ಬೆಂಗಳೂರಿನಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ, ಖಾಸಗಿ ಶಾಲಾ ಆಡಳಿತ ವರ್ಗದವರು ವಿದ್ಯಾರ್ಥಿಗಳ ಪೋಷಕರಿಂದ ದುಬಾರಿ ಡೊನೇಶನ್ ಸುಲಿಗೆ ಮಾಡಿದರೆ ಅವುಗಳಿಗೆ ನೀಡಿದ ಮಾನ್ಯತೆಯನ್ನು ರದ್ದು ಮಾಡಲು ಸರ್ಕಾರ ಹಿಂಜರಿಯದು ಎಂದು ತಿಳಿಸಿದ್ದಾರೆ. ಇದರ ಕುರಿತು ಪೋಷಕರು ನಿರ್ದಿಷ್ಟ ಪ್ರಕರಣಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ತಮ್ಮ ಖಾತೆಯ ಮೇಲಿನ ಜವಾಬ್ದಾರಿಯನ್ನು ಪಾಲಕರ ತಲೆಯ ಮೇಲೆ ಹೇರಿದ್ದಾರೆ.

ಬಂಡವಾಳಶಾಹಿ ವರ್ಗದ ಪ್ರತಿನಿಧಿಯಾದ ಜನತಾ ಸರ್ಕಾರ ಶಿಕ್ಷಣರಂಗದಲ್ಲಿ ಕ್ರಾಂತಿಕಾರಿ ಬದಲಾವಣೆ ತರುತ್ತದೆಂಬ ಕನಸನ್ನು ನಾವು ಕಾಣುತ್ತಿಲ್ಲ. ಆದರೆ ಜನತೆ ಜಾಗೃತಗೊಳ್ಳುತ್ತಿದ್ದಂತೆ ಸರ್ಕಾರ ಕೂಡ ತನ್ನ ನಿಲುವುಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದೆಂಬ ನಂಬಿಕೆ ಕೆಲವರಲ್ಲಿ ಒಡಮೂಡಿ ಬಂದರೆ ಆಶ್ಚರ್ಯಪಡುವ ಕಾರಣವಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಕ್ರಾಂತಿಕಾರಿ ಬದಲಾವಣೆ ಶಿಕ್ಷಣರಂಗದಲ್ಲಿ ಬರಬಹುದೆಂಬ ಅಪೇಕ್ಷೆ ದೂರದ ಕನಸಾಗಬಹುದು. ಮೊನ್ನೆ ತಾನೇ ನೀಡಲ್ಪಟ್ಟ ಹೈಕೋರ್ಟಿನ ನಿರ್ಣಯ ಖಾಸಗೀ ಶಾಲಾ ಆಡಳಿತ ವರ್ಗಗಳಿಗೆ ಬೆಂಬಲವಾಗಿರುವಾಗ ಸರ್ಕಾರದ ಉಗ್ರ ಕ್ರಮದಿಂದ ಮಾತ್ರ ಅಥವಾ ಪಾಲಕರ ಮತ್ತು ವಿದ್ಯಾರ್ಥಿಗಳ ಪ್ರಬಲ ಚಳುವಳಿಯಿಂದ ಮಾತ್ರ ಈ ಕ್ಯಾನ್ಸರ್ ರೋಗವನ್ನು ಶಿಕ್ಷಣರಂಗದಿಂದ ದೂರೀಕರಿಸಲು ಸಾಧ್ಯ. ವಿದ್ಯಾರ್ಥಿರಂಗ ಈ ದಿಸೆಯಲ್ಲಿ ತೀವ್ರ ಚಳುವಳಿ ನಡೆಸಲು ತಯಾರಿದ್ದರೂ ಕೂಡ ಸರ್ಕಾರದ ಅನಿರ್ದಿಷ್ಟ ಧೋರಣೆ ಪಾಲಕರಲ್ಲಿ ನಿರಾಶಾಭಾವನೆಯನ್ನು ಉಂಟುಮಾಡಿ "ಹೇಗಾದರೂ ತಮ್ಮ ಮಕ್ಕಳಿಗೆ ಪ್ರವೇಶ ದೊರೆತರೆ ಸಾಕೆಂದು" ತಿಳಿದು ಅವರು ಡೊನೇಶನ್ ಪ್ರವಾಹದಲ್ಲಿ ಗತ್ಯಂತರವಿಲ್ಲದೆ ಮುಳುಗೇಳುವ ಪರಿಸ್ಥಿತಿ ಉಂಟಾಗಿದ್ದು ಆಶ್ಚರ್ಯಪಡಬೇಕಾಗಿಲ್ಲ. ಜನತೆಯಲ್ಲಿ ಜಾಗೃತ ಮನೋಭಾವನೆ ಬೆಳೆಸಿ, ಸಮಸ್ಯೆಗಳ ಪರಿಹಾರಕ್ಕೆ ಹೋರಾಟ - ಚಳುವಳಿಗಳೇ ದಾರಿ ಮಾತ್ರವೆಂಬುದನ್ನು ಮನವರಿಕೆ ಮಾಡಿಕೊಡುವುದು ಅತ್ಯಂತ ಅವಶ್ಯ ಕರ್ತವ್ಯ. ಈ ಕರ್ತವ್ಯ ಮಾಡಲು ಎಲ್ಲರೂ ಮುಂದಾಗಬೇಕಾದ್ದು ಅತ್ಯಗತ್ಯ.

ದತ್ತಕ ಮಕ್ಕಳಲ್ಲ— ದತ್ತಕ ಗ್ರಾಮಗಳು

ಚುನಾವಣೆಗಳು ಬಂದಾಗಲೆಲ್ಲ ಮತದಾರರಿಗೆ ಭರವಸೆ ನೀಡುವ ಪದ್ಧತಿ ಎಲ್ಲ ಕಡೆಯಲ್ಲೂ ಜಾರಿಯಲ್ಲಿದೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳ ಆಧಾರಗಳಲ್ಲಿ ಮತ ಪಡೆಯಲು ಪ್ರಯತ್ನ ಮಾಡುತ್ತವೆ. ಅಂಥ ಚುನಾವಣಾ ಪ್ರಣಾಳಿಕೆಗಳಿಂದಲೇ ಸಮಾಧಾನಗೊಳ್ಳದೆ, ಪ್ರತಿಕೂಲ ನಿರ್ಣಯ ಹೊರಬೀಳಬಹುದೆಂಬ ಅಂಜಿಕೆಯಿಂದ ಇನ್ನೂ ಏನೇನೋ ಆಶ್ವಾಸನೆ - ಆಮಿಷಗಳನ್ನು ತೋರಿಸುವ ಪ್ರಯತ್ನ ಕೂಡ ಚುನಾವಣೆಯ ಸಮಯದಲ್ಲಿ ನಡೆಯುತ್ತಿರುತ್ತದೆ. ಹೆಣ್ಣು, ಹೊನ್ನು, ನೌಕರಿ, ಸಾರ್ವಜನಿಕ ಕೆಲಸಗಳ ಆಮಿಷ ತೋರಿಸುವುದರಲ್ಲಿ ಇಂದಿರಾ ಕಾಂಗ್ರೆಸ್ ಮಂತ್ರಿಗಳು ಪ್ರಥಮ ಸ್ಥಾನಗಳಿಸುತ್ತಿದ್ದಾರೆ. ಇಂಥ ಆಮಿಷಗೆ ಬಲಿಯಾಗಿ ಬೆಳಕು ಕಾಣದಿರುವ ನಮ್ಮ ರಾಜ್ಯದ ಅತಿ ದೊಡ್ಡ ಕೈಗಾರಿಕೆ ವಿಜಯನಗರದ ಉಕ್ಕಿನ ಕಾರ್ಖಾನೆ. 1970ರಿಂದಲೂ ದಿಕ್ಕು ಕಾಣದೆ ಉಳಿದಿದೆ. ಜನವರಿ ತಿಂಗಳಲ್ಲಿ ನಡೆದ ವಿಧಾನಸಭೆಯ ಸಂಧಿ ಕಾಲದಲ್ಲಿ ಮತ್ತೆ ಇದಕ್ಕೆ ಸಾಕಷ್ಟು ಪ್ರಚಾರ ದೊರಕಿದ್ದರೂ ಕೂಡ, ಇತ್ತೀಚಿಗಿನ ದಿಲ್ಲಿಯ ಸುದ್ದಿ ಪ್ರಕಾರ ಇದರಲ್ಲಿ ರಾಜಕೀಯ ಅಡಕವಾಗಿದೆ. ಕಾರಣ ವಿಜಯನಗರ ಸಾಮ್ರಾಜ್ಯ ಹಾಳು ಬಿದ್ದಂತೆಯೇ ಉಕ್ಕಿನ ಕಾರ್ಖಾನೆಯ ಗತಿಯಾಗಿದೆಯೆಂದು ಈಗ ಗೊತ್ತಾಗಿದೆ.

ಇಂದಿರಾ ಕಾಂಗ್ರೆಸ್ ದಾರಿಯನ್ನೇ ಜನತಾ ಪಕ್ಷವು ತುಳಿಯುತ್ತದೆಂದು ನಾವು ಅಪೇಕ್ಷಿಸಿರಲಿಲ್ಲ. ಆದರೆ ಕನಕಪುರ ಉಪ ಚುನಾವಣೆಯಲ್ಲಿ ಜನತಾ ಪಕ್ಷದ ಕೆಲವು ಮಂತ್ರಿಗಳ ವರ್ತನೆ ಇಂದಿರಾ ಕಾಂಗ್ರೆಸ್ಸನ್ನೂ ಮೀರಿಸುವಂತಾಗಿದೆಯೆಂದು ಕಂಡು ಬರುತ್ತದೆ.

ರಾಮಕೃಷ್ಣ ಹೆಗಡೆಯವರು ಕನಕಪುರದಿಂದ ಆರಿಸಿ ಬರಬೇಕೆಂದು ಪ್ರತಿಯೊಬ್ಬ ವಿಚಾರವಂತನ ಆಸೆಯಾಗಿದೆ. ಹೆಗಡೆಯವರು ಈ ಕ್ಷೇತ್ರದಿಂದ ಸ್ಪರ್ಧಿಸಬೇಕೆಂದು ನಿರ್ಣಯ ಮಾಡುವ ಮುಂಚೆಯೇ ಜನಾಭಿಪ್ರಾಯ ಸಂಗ್ರಹಿಸಲಾಗಿತ್ತೆಂದು ತಿಳಿದು ಬಂದಿದೆ. ಹಾಗಿರುವಾಗ ಲೋಕೋಪಯೋಗಿ ಮಂತ್ರಿ ದೇವೇಗೌಡರು "ಕನಕಪುರ ತಾಲ್ಲೂಕನ್ನು ದತ್ತು ಸ್ವೀಕಾರ ಮಾಡಿ ಅಭಿವೃದ್ಧಿ ಪಡಿಸುತ್ತೇನೆ" ಎಂದು ಹೇಳಿ ಇಂದಿರಮ್ಮ, ಗುಂಡೂರಾಯರೂ ನಾಚುವಂತೆ ಮಾಡಿದ್ದಾರೆ. ದೇವೇಗೌಡರ ಈ ಕ್ರಮವನ್ನು ಸ್ವಾಗತಿಸುವುದಾಗಲೀ, ಸಮರ್ಥಿಸುವುದಾಗಲೀ ಬಹಳ ಕಷ್ಟ; ಅಷ್ಟೇ ಅಲ್ಲ ಸಮರ್ಪಕವೂ ಅಲ್ಲ. ದೇವೇಗೌಡರ ಈ ಕ್ರಮ ನಿಜವಾಗಿಯೂ ರಾಮಕೃಷ್ಣ ಹೆಗಡೆಯವರಿಗೆ, ಅವರಿಗೆ ಬೆಂಬಲ ನೀಡುತ್ತಿರುವ ಸ್ನೇಹಿತ ಪಕ್ಷಗಳಿಗೆ ಹಾಗೆಯೇ ಹೆಗಡೆಯವರಿಗೆ ನಿಷ್ಠೆಯಿಂದ ಮತ ನೀಡುವ ಮತದಾರರಿಗೂ ಅಪಮಾನ ಕಾರಕವೆಂದೇ ಹೇಳಬೇಕಾಗುತ್ತದೆ. ಮೂರು ತಿಂಗಳ ಜನತಾ ಸರ್ಕಾರದ ಕೆಲಸ, ಜನತಾ ಪಕ್ಷದ ಹಾಗೆಯೇ ವಿರೋಧಿ ಪಕ್ಷಗಳ ಸಂಘಟನೆ, ಜನಸಂಪರ್ಕದಿಂದಲೇ ಕನಕಪುರದಲ್ಲಿ ಆರಿಸಿ ಬರುವ ಸಂಭವವಿರುವಾಗ ದೇವೇಗೌಡರ ನಿಲುವು ವಿರೋಧ ಪಕ್ಷಗಳಿಗೆ ಅಪಪ್ರಚಾರ ಮಾಡಲು ಆಹಾರ ಒದಗಿಸಿದಂತಾಗುತ್ತದೆ. ಚುನಾವಣೆ ಕಾಲದಲ್ಲಿ ಇಂಥ ಆಶ್ವಾಸನೆಗಳು ಹಾಸ್ಯಾಸ್ಪದ ಅಷ್ಟೇ ಅಲ್ಲ ಭ್ರಷ್ಟಾಚಾರದ ಒಂದು ರೂಪವೆಂದೇ ಹೇಳಬೇಕಾಗುತ್ತದೆ.

ನಾಯಿಬಾಲ ಡೊಂಕೇ

ಕೊಳವೆಯೊಳಗೆ ಹಾಕಿಟ್ಟರೂ ಕೂಡ, ಕೊಳವೆ ತೆಗೆದ ನಂತರ ನಾಯಿ ಬಾಲ ಡೊಂಕೇ ಎಂಬ ಗಾದೆಯಂತೆ ನಮ್ಮ ರಾಜ್ಯದ ಪೋಲೀಸ್ ಹಾಗೂ ಕಾರ್ಮಿಕ ಖಾತೆಯಾಗಿದೆ. ರಾಮಕೃಷ್ಣ ಹೆಗಡೆ ಸರ್ಕಾರ ಅಧಿಕಾರಕ್ಕೆ ಬಂದ ಕೆಲವು ದಿವಸ ಈ ಎರಡ ಖಾತೆಗಳೂ ಸಂಯಮದಿಂದ ವರ್ತಿಸಿದವು. ಗುಂಡೂರಾವ್ ಕಾಲದ ಆಟಾಟೋಪ ಕಡಿಮೆಯಾಯಿತೆಂದೂ ಸರ್ಕಾರದ ಬದಲಾವಣೆ ಇವರ ಮೇಲೆ ಪರಿಣಾಮ ಬೀರಿತೆಂದೂ ಜನ ತಿಳಿದುಕೊಂಡರು. ರಾಮಕೃಷ್ಣ ಹೆಗಡೆಯವರ ನೂರು ದಿವಸದ ಆಡಳಿತ ಮುಗಿಯುತ್ತಿದ್ದಂತೆಯೇ ಈ ಎರಡೂ ಖಾತೆಗಳು ತಮ್ಮ ನಿಜಸ್ವರೂಪ ಪ್ರದರ್ಶನ ಮಾಡಲು ಪ್ರಾರಂಭಿಸಿದ್ದಾರೆ. ಸರ್ಕಾರದ ಹೆಸರು ಕೆಡಿಸುವ ಕುಚೋದ್ಯತನವೋ ಅಥವಾ ತಮ್ಮ ಸ್ವಭಾವ ಗುಣವೋ ಏನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಕಾರ್ಮಿಕರ ಚಳುವಳಿಯಲ್ಲಿ ಪೋಲೀಸರ ಕೈವಾಡ ಹೆಚ್ಚಾಗುತ್ತಿದೆ. ಬಿನ್ನಿಮಿಲ್ ಕಾರ್ಮಿಕರು ಉಪವಾಸ ಸತ್ಯಾಗ್ರಹ ಕೈಗೊಂಡಾಗಲೂ ಅವರನ್ನು ಬಂಧಿಸಲಾಯಿತು. ಶಾಂತಿಯುತವಾದ ಮುಷ್ಕರ ನಡೆಯುತ್ತಿದ್ದರೂ ಕೂಡ, ಮಾಲೀಕರ ಹೇಳಿಕೆಯ ಮೇರೆಗೆ, ಕಾರ್ಮಿಕರ ಹೋರಾಟವನ್ನು ಹತ್ತಿಕ್ಕುವ ಸಲುವಾಗಿ ಪ್ರತಿಬಂಧಕಾಜ್ಞೆಗಳನ್ನು ಬೆಂಗಳೂರಿನ ಐ. ಟಿ. ಸಿ., ಹರಿಹರ ಪಾಲಿಫೈಬರ್ ಮೊದಲಾದ ಕಾರ್ಖಾನೆಯ ಸುತ್ತಮುತ್ತ ಹೇರಲಾಗಿದೆ. ಕಾರ್ಮಿಕ ಪ್ರಾತಿನಿಧ್ಯವನ್ನು ಕಂಡು ಹಿಡಿಯಲು ಸರ್ಕಾರ ಯಾವುದೇ ನಿರ್ದಿಷ್ಟ ನಿಯಮಗಳನ್ನು ಮಾಡಿರುವುದಿಲ್ಲ. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳ ಬಲಾಬಲಗಳನ್ನು ಕಂಡುಹಿಡಿಯಬೇಕೆಂದು ಸಿ. ಐ. ಟಿ. ಯು. ಒತ್ತಾಯಪಡಿಸುತ್ತಿದೆ. ಕಾರ್ಮಿಕರ ಬೇಡಿಕೆಗಳ ಕುರಿತು ಚರ್ಚೆ ಮಾಡಲು, ಲೇಬರ್ ಕಮಿಷನರ್, ಕಾರ್ಮಿಕ ಮಂತ್ರಿಗಳೂ ಸೇರಿ ಮಾಲಿಕರನ್ನು ಆಮಂತ್ರಿಸಿದರೂ ಕೂಡ, ಅದನ್ನು ನಿರಾಕರಿಸುವ ಧೈರ್ಯ ಕೆಲವು ಮಾಲೀಕರು ತೋರ್ಪಡಿಸಬೇಕಾದರೆ, ಆಡಳಿತೆಯ ಕೊಂಡಿ ಎಲ್ಲಿಯೋ ಸಡಿಲಾಗಿರಬೇಕೆಂಬ ಸಂಶಯ ಬರುತ್ತದೆ. ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಕೊಳ್ಳುವುದು ಒತ್ತಟ್ಟಿಗಿರಲಿ, ಅವರ ಸಮಕ್ಷಮ ಕೂತುಕೊಳ್ಳಲೂ ನಿರಾಕರಿಸುತ್ತಿರುವ ಮಾಲೀಕರಿಗೆ ಕಿವಿಹಿಂಡುವ ಧೈರ್ಯ ಅಧಿಕಾರಿಗಳಿಗಾಗಲೀ, ಮಂತ್ರಿಗಳಿಗಾಗಲೀ ಇಲ್ಲದಿರಬೇಕಾದರೆ, ಅದನ್ನು ಗಂಭೀರವಾಗಿ ವಿಚಾರ ಮಾಡಲೇಬೇಕಾಗುತ್ತದೆ.

ಇಂಥ ಹೊಸ ಪರಿಸ್ಥಿತಿಯನ್ನು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ. ಇದನ್ನು ಕೂಡಲೇ ಸರಿಪಡಿಸುವುದು ಅತ್ಯಗತ್ಯ. ಕೇಂದ್ರ ಕಾರ್ಮಿಕ ಸಂಘಟನೆಗಳೂ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ, ಇದರ ಕಡೆ ತೀವ್ರ ಗಮನಹರಿಸಿ ಪರಿಹಾರ ಕಂಡು ಹಿಡಿಯುವುದು ಅತ್ಯಗತ್ಯ. ★

ಮಿನಿ ಜಲವಿದ್ಯುತ್ ಜನಕಗಳು

"ಚೀನಾ ದೇಶದಲ್ಲಿ ಮಿನಿ ಜಲವಿದ್ಯುತ್ ಜನಕಗಳನ್ನು ಸ್ಥಾಪಿಸಿಕೊಂಡು ಗ್ರಾಮೀಣ ಕಮ್ಯೂನ್‌ಗಳ ಮುಕ್ಕಾಲು ಪಾಲು ವಿದ್ಯುತ್ ಅಗತ್ಯ ಪೂರೈಸಿಕೊಂಡಿರುವಾಗ ಇಲ್ಲೇಕೆ ಅದು ಸಾಧ್ಯವಾಗದು". ಎಂದು ಭಾರತೀಯ ಸಾಮಾಜಿಕ ಆರ್ಥಿಕ ಅಧ್ಯಯನ ಕೇಂದ್ರದ ನಿರ್ದೇಶಕ ಡಾ। ವಿ. ಪಿ. ಪಾಟೀಲ ಕೇಳುತ್ತಾರೆ. ವಿದ್ಯುತ್ ಉತ್ಪಾದನೆ ಮತ್ತು ನೀರಾವರಿ ಉದ್ದೇಶದ 200 ಪುಟ್ಟ ಅಣೆಕಟ್ಟುಗಳನ್ನು ಕಟ್ಟಲು ಕರ್ನಾಟಕದಲ್ಲಿ ಅವಕಾಶಗಳಿವೆಯೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಕಲ್ಲಿದ್ದಲು ಅಲಭ್ಯವಾದ್ದರಿಂದ ಇನ್ನಷ್ಟು ಜಲವಿದ್ಯುತ್ ಸಂಪನ್ಮೂಲ ರೂಢಿಸಿಕೊಳ್ಳುವುದು ಅನಿವಾರ್ಯ. ಎಲ್ಲ ಬಗೆ ವಿದ್ಯುತ್ತಿನಲ್ಲಿ ಜಲವಿದ್ಯುತ್ತೇ ಅಗ್ಗ. ಭಾರತದಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ ವಿದ್ಯುದುತ್ಪಾದನಾ ಸಾಮರ್ಥ್ಯ 20 ಪಟ್ಟು ಹೆಚ್ಚಿ ವಿಶ್ವದಾಖಲೆ ಎನಿಸಿಕೊಂಡಿದೆ. ಆದರೆ ವಿದ್ಯುತ್ತಿನ ತಲಾ ಬಳಕೆ ಸಹಾ 18 ಪಟ್ಟು ಹೆಚ್ಚಿದೆ. ಜನಸಂಖ್ಯೆ ಏರಿದಂತೆಲ್ಲ ಅಭಾವ ಹೆಚ್ಚುತ್ತದೆಂದೂ ಹೇಳಿದರು.

ಚೀನಾ ದೇಶದಲ್ಲಿ ಕಮ್ಯೂನಿಸ್ಟ್ ಸರ್ಕಾರವಿದೆ. ಜನರಿಗೆ ಉಪಯೋಗವಾಗುವ ಯೋಜನೆಗಳನ್ನು ಕೈಗೊಂಡಿದ್ದಾರೆ. ಕರ್ನಾಟಕದಲ್ಲೂ ಸಂಪನ್ಮೂಲಗಳನ್ನು ಪ್ರಯೋಗಿಸಲು ಅವಕಾಶಗಳಿವೆ ಎಂದು ಹೇಳುವ ಡಾ। ಪಾಟೀಲರು ಅಂಥ ಯೋಜನೆಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರಿಗೂ ಸರ್ಕಾರಕ್ಕೂ ತಿಳಿಯಗೊಳಿಸಿದ್ದಾದರೆ ಅದನ್ನು ಕಾರ್ಯರೂಪದಲ್ಲಿ ತರುವಂತೆ ಪ್ರಯತ್ನ ಮಾಡಲು ಸಾಧ್ಯ. ಆದ್ದರಿಂದ ಡಾ। ಪಾಟೀಲರು ಚೀನಾ ದೇಶದಲ್ಲಿಯ ತಮ್ಮ ಸಂಚಾರದ ಪೂರ್ಣ ಅನುಭವಗಳನ್ನು ಸಾರ್ವಜನಿಕರಿಗೆ ತಿಳಿಯಪಡಿಸಬೇಕು. ಅದರ ಉಪಯೋಗ ಭಾರತ ದೇಶಕ್ಕೂ, ಕರ್ನಾಟಕ ರಾಜ್ಯಕ್ಕೂ ಸಿಗುವಂತಾಗಬೇಕು.

ದೊಡ್ಡಬಳ್ಳಾಪುರ

ಡಿ. ವೈ. ಎಫ್. ಐ. ಸಭೆ

ದಿನಾಂಕ 24-4-83 ಭಾನುವಾರ ಮಧ್ಯಾಹ್ನ ದೊಡ್ಡಬಳ್ಳಾಪುರ ತಾಲ್ಲೂಕಿನ ಡಿ. ವೈ. ಎಫ್. ಐ. ಸಭೆ ದೊಡ್ಡಬಳ್ಳಾಪುರದಲ್ಲಿ ನಡೆಯಿತು. ಜಿಲ್ಲಾ ಅಧ್ಯಕ್ಷರಾದ ಕಾ। ಜಯಶೇಖರ್ ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಕಾ। ಎಸ್. ಶಿವರಾಂ ಅವರು ಯುವಜನರು ಕೋಮು, ಭಾಷೆ, ಕೆಟ್ಟ ಸಂಸ್ಕೃತಿ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ಹಿಂದೆ ಹೋಗುತ್ತಿರುವ ಸಂದರ್ಭವನ್ನು ವಿವರಿಸಿದರು

ಸಭೆಯಲ್ಲಿ ತಾಲ್ಲೂಕು ಮಟ್ಟದ ಸಮ್ಮೇಳನವನ್ನು ಮೇ ತಿಂಗಳ ಕೊನೆಯ ಅಥವ ಜೂನ್ ತಿಂಗಳ ಮೊದಲ ವಾರದಲ್ಲಿ ನಡೆಸಲು ನಿರ್ಣಯಿಸಲಾಯಿತು.

ತುಮಕೂರು :

ಬೀಡಿ ಕಾರ್ಮಿಕರಿಂದ ಪಿಕೆಟಿಂಗ್

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ನಿನ ಕರೆಯ ಮೇರೆಗೆ ತುಮಕೂರಿನ ಬೀಡಿ ಕಾರ್ಮಿಕರು ತಾ॥ 25-4-83ರಂದು ಗಣೇಶ ಬೀಡಿ ಅಂಗ ಸಂಸ್ಥೆಯಾದ ಜ್ಯೋತಿ ಹೋಂ ಇಂಡಸ್ಟ್ರೀಸ್ ಮುಂದೆ ನೂರಾರು ಮಹಿಳಾ ಕಾರ್ಮಿಕರನ್ನೊಳಗೊಂಡು ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ಕಾರ್ಖಾನೆಯ ಕೆಲಸ ಕಾರ್ಯಗಳು ನಡೆಯದಂತೆ ಪಿಕೆಟಿಂಗ್ ನಡೆಸಿದರು. ಅವರುಗಳ ಮುಖ್ಯ ಬೇಡಿಕೆಗಳಾದ ಸಾವಿರ ಬೀಡಿಯ ಕೂಲಿ 12 ರೂ. ನಿಗದಿಯಾಗಬೇಕು. ಶೇಕಡ 20 ಬೋನಸ್ ಸಿಗಬೇಕು. ಕಂಟ್ರಾಕ್ಟ್ ಪದ್ಧತಿ ರದ್ದಾಗಬೇಕು ಎಂಬ ಘೋಷಣೆಗಳ ಫಲಕಗಳ ಜೊತೆಗೆ ಕೆಂಪು ಬಾವುಟ ಹಿಡಿದು ಪ್ರದರ್ಶನ ನಡೆಸಿದರು.

ಇವರುಗಳ ಬೇಡಿಕೆಗಳನ್ನು ಬೆಂಬಲಿಸಿ ರಾಜ್ಯ ರೈತ ಸಂಘದ ತುಮಕೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಗೋವಿಂದರಾಜು, ಮುಖಂಡರಾದ ರಂಗಪ್ಪದಾಸರು, ಪಂಡಿತ ದಾಸಪ್ಪನವರು ಮತ್ತಿತರರು ಬೀಡಿ ಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸಿ ಮಾತನಾಡಿದರು.

ರಾಜ್ಯದ ಸಿ.ಐ.ಟಿ.ಯು. ಕಾರ್ಯದರ್ಶಿಗಳಾದ ಶ್ರೀ ಎಂ. ದಸ್ತಗೀರ್ ಹಾಗೂ ರವೀಂದ್ರ ನಾಯಕ್ ವದೂದ್, ಮಕ್‌ಬೂಲ್, ಹಾಜರಾಂಬಿರವರುಗಳು ಪಿಕೆಟಿಂಗ್‌ನ ನಾಯಕತ್ವ ವಹಿಸಿದ್ದರು.

ಮೇ ದಿನಾಚರಣೆ

ರಾಜ್ಯಾದ್ಯಂತ ಬೃಹತ್ ಮೆರವಣಿಗೆ - ಬಹಿರಂಗ ಸಭೆಗಳು

ಬೆಂಗಳೂರು

ವಿಶ್ವ ಕಾರ್ಮಿಕರ ದಿನಾಚರಣೆಯಾದ ಮೇ 1ರಂದು ಕರ್ನಾಟಕ ರಾಜ್ಯ ಸರ್ಕಾರ ರಜಾ ಘೋಷಿಸಿದ್ದರೂ ಕೂಡ, ಇಂದಿರಾಗಾಂಧಿಯವರ ಕೇಂದ್ರ ಸರ್ಕಾರ ರಜೆಯನ್ನು ಘೋಷಿಸದೇಇದ್ದುದರಿಂದಾಗಿ ಹಲವು ಕಾರ್ಖಾನೆಗಳ ಕಾರ್ಮಿಕರು ಸಾಮೂಹಿಕವಾಗಿ ರಜೆ ಹಾಕಿ, ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ಮತ್ತು ಹೆಚ್. ಎಂ. ಎಸ್. ಕಾರ್ಮಿಕ ಸಂಘಟನೆಗಳು ಸಂಯುಕ್ತವಾಗಿ ವ್ಯವಸ್ಥೆಗೊಳಿಸಿದ್ದ ಮೇ ದಿನಾಚರಣೆಯಲ್ಲಿ ಪಾಲ್ಗೊಂಡರು. ನಗರದ ಮಾಂಸಾಹಾರೀ ಹೋಟೆಲ್‌ಗಳು ತಮ್ಮ ಕಾರ್ಮಿಕರಿಗೆ ರಜೆಯನ್ನು ಘೋಷಿಸಿದ್ದವು. ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘವು ರಾಜ್ಯ ಸರ್ಕಾರ 'ಮೇ ದಿನ'ದ ರಜೆ ಘೋಷಿಸಿದ ಹಿನ್ನೆಲೆಯಲ್ಲಿ ಹೋಟೆಲ್ ಮಾಲೀಕರನ್ನು ಒತ್ತಾಯಿಸಿದ ನಂತರ ಮಾಲೀಕರು ರಜೆ ಕೊಡಲು ಒಪ್ಪಿಕೊಂಡರು.

ನಗರದ ನಾಲ್ಕು ದಿಕ್ಕುಗಳಿಂದಲೂ ಸಹಸ್ರಾರು ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟು ಚಿಕ್ಕಲಾಲ್‌ಬಾಗ್‌ನಲ್ಲಿ ಸೇರಿದರು. ಯಶವಂತಪುರ, ಮೈಸೂರು ರಸ್ತೆ, ಕೆ. ಆರ್. ಪುರಂ, ಬಳ್ಳಾರಿ ರಸ್ತೆ ಪ್ರದೇಶಗಳಿಂದ ಮೆರವಣಿಗೆಗಳು ಹೊರಟವು. ಅಲ್ಲದೆ ನಗರದ ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಿಂದ ಹೊರಟ ಮೆರವಣಿಗೆಯಲ್ಲಿ ಬೀಡಿ ಕಾರ್ಮಿಕರು, ಹೋಟೆಲ್ ಕಾರ್ಮಿಕರು, ಮೈಕೋ ಕಾರ್ಮಿಕರು ಮತ್ತು ಆಟೋರಿಕ್ಷಾ ಚಾಲಕರು ತಮ್ಮ ಆಟೋಗಳೊಂದಿಗೆ ಭಾಗವಹಿಸಿದರು.

ಕೆಂಪು ಬಾವುಟಗಳನ್ನು ಹಿಡಿದಿದ್ದ ಮೆರವಣಿಗೆಕಾರರು 'ರೀಗನ್‌ನ ಅಣು ಯುದ್ಧ ಸನ್ನಾಹಕ್ಕೆ ಧಿಕ್ಕಾರ' 'ವಿಶ್ವ ಶಾಂತಿ ಚಿರಾಯುವಾಗಲಿ' 'ಛಿದ್ರಕಾರೀ ಶಕ್ತಿಗಳನ್ನು ಸೋಲಿಸಿ' 'ರಾಷ್ಟ್ರದ ಸಮಗ್ರತೆಗಾಗಿ ಹೋರಾಡಿ' 'ವಿಶ್ವ ಕಾರ್ಮಿಕರೇ ಒಂದಾಗಿ' ಮುಂತಾಗಿ ಘೋಷಣೆಗಳನ್ನು ಕೂಗುತ್ತಿದ್ದರು.

ಬಹಿರಂಗ ಸಭೆಯು ಸಂಜೆ ಆರು ಗಂಟೆಗೆ ಚಿಕ್ಕ ಲಾಲ್‌ಬಾಗ್‌ನಲ್ಲಿ ಪ್ರಾರಂಭಗೊಂಡಿತು. ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು.ನ ಕಾ| ರೇವಣ್ಣ ವಹಿಸಿದ್ದರು. ಸಿ. ಐ. ಟಿ. ಯು.ನ ಕಾ| ಆರ್. ಶ್ರೀನಿವಾಸ್ ಸ್ವಾಗತ ಭಾಷಣ ಮಾಡಿದರು. ಎ.ಐ.ಟಿ.ಯು.ಸಿ.ಯ ಕಾ| ಎಂ. ಸಿ. ವೆಂಕಟರಾವ್, ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ಧಿಯ ಕುರಿತು ನಿರ್ಣಯ ಮಂಡಿಸಿದರು. ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರೂ ಹಾಗೂ ವಿಧಾನಸಭಾ ಸದಸ್ಯರೂ ಆದ ಕಾ| ಎಸ್. ಸೂರ್ಯನಾರಾಯಣರಾವ್ ಅವರು ರೀಗನ್ ಸರ್ಕಾರದ ಅಣು ಯುದ್ಧ ನೀತಿಯಿಂದ ಪ್ರಪಂಚಕ್ಕೆ ಆಗಬಹುದಾದ ಅಪಾಯದ ಬಗ್ಗೆ, ಭಾರತ ದೇಶದಲ್ಲಿ ಛಿದ್ರಕಾರೀ ಶಕ್ತಿಗಳು ನಡೆಸುತ್ತಿರುವ ಚಟುವಟಿಕೆ, ಇಂದಿರಾ ಸರ್ಕಾರದ ಕಾರ್ಮಿಕ ವಿರೋಧಿ ನೀತಿ, ಕರ್ನಾಟಕದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಹಿನ್ನೆಲೆ ಮತ್ತು ಕಾರ್ಮಿಕರ ಬಗ್ಗೆ ಅದು ಅನುಸರಿಸುತ್ತಿರುವ ನೀತಿಯ ಕುರಿತಾಗಿ ತಮ್ಮ ಸುದೀರ್ಘ ಭಾಷಣದಲ್ಲಿ ವಿವರಿಸಿದರು.

ಎ.ಐ.ಟಿ.ಯು.ಸಿ. ಪರವಾಗಿ ಕಾ| ಎಂ. ಎಸ್. ಕೃಷ್ಣನ್ ಮತ್ತು ಹೆಚ್. ಎಂ. ಎಸ್.ನ ಪರವಾಗಿ ಕಾ| ಮೈಕೇಲ್ ಫರ್ನಾಂಡಿಸ್ ಅವರುಗಳು ಮಾತನಾಡಿದರು.

ಎ.ಐ.ಟಿ.ಯು.ಸಿ.ಯ ಕಾ| ಮಹದೇವನ್‌ರವರು ವಂದನಾರ್ಪಣೆ ಮಾಡಿದರು.

ಮೈಸೂರು

ಮೇ ದಿನಾಚರಣೆಯ ಅಂಗವಾಗಿ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್. ಅಲ್ಲದೆ ಎಲ್. ಐ. ಸಿ. ರೈಲ್ವೆ ಬ್ಯಾಂಕ್ ಹಾಗೂ ಅಂಚೆ ತಂತಿ ನೌಕರರು ಸಹಸ್ರಾರು ಸಂಖ್ಯೆಯಲ್ಲಿ ಸೇರಿ ರೈಲ್ವೇ ಸ್ಟೇಷನ್ ಮುಂಭಾಗದ ಜೀವರಾಯನಕಟ್ಟೆಯಿಂದ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆಯು ಟೌನ್ ಹಾಲ್ ಮೈದಾನದಲ್ಲಿ ಸೇರಿದ ನಂತರ ಪ್ರಾರಂಭಗೊಂಡ ಬಹಿರಂಗ ಸಭೆಯಲ್ಲಿ ಸಿ.ಐ.ಟಿ.ಯು. ಪರವಾಗಿ ಕಾ| ಎಂ. ಎನ್. ಉಗ್ರಪ್ಪ ಮತ್ತು ಕಾ| ಮೋಹನಕುಮಾರ್, ಎ. ಐ. ಟಿ. ಯು. ಸಿ. ಪರವಾಗಿ ಕಾ| ವೆಂಕಟರಾಮಯ್ಯ, ಹೆಚ್. ಎಂ. ಎಸ್. ಪರವಾಗಿ ಕಾ| ಟಿ. ವಿ. ಶ್ರೀನಿವಾಸರಾವ್ ಮಾತನಾಡಿದರು. ಕಾರ್ಮಿಕ ಮಂತ್ರಿ ಶ್ರೀ ಅಜೀಜ್‌ಸೇಠ್ ಅವರೂ ಕೂಡ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೊನೆಯಲ್ಲಿ ಸಮುದಾಯ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ದೊಡ್ಡಬಳ್ಳಾಪುರ

ಮೇ ದಿನಾಚರಣೆಯ ಅಂಗವಾಗಿ ದೊಡ್ಡಬಳ್ಳಾಪುರದಲ್ಲಿ ಮಧ್ಯಾಹ್ನ 4 ಗಂಟೆಗೆ ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ. ಕಾರ್ಮಿಕರು ಮೆರವಣಿಗೆ ನಡೆಸಿದರು. ಕಾ| ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಬಹಿರಂಗಸಭೆಯನ್ನುದ್ದೇಶಿಸಿ ಕಾಮ್ರೇಡುಗಳಾದ ಮುತ್ತನರಸಯ್ಯ, ರಾಮಭದ್ರಯ್ಯ, ರಾಮಾಂಜನಪ್ಪ, ವೆಂಕಟೇಶ, ಎಸ್. ಆರ್. ಆರಾಧ್ಯ ಮಾತನಾಡಿದರು.

ಕಾ| ಎಂ. ಕೃಷ್ಣಮೂರ್ತಿ ಸ್ವಾಗತಿಸಿದರು.

ಕೊನೆಯಲ್ಲಿ ಕಾರ್ಮಿಕರಿಂದ 'ಶ್ರಮ' ಎಂಬ ನಾಟಕವನ್ನು ಅಭಿನಯಿಸಲಾಯಿತು.

ಶಿವಮೊಗ್ಗ

ದಿನಾಂಕ 5-1-83ನೇ ಭಾನುವಾರ ಮಧ್ಯಾಹ್ನ 4 ಗಂಟೆಗೆ, ಶಿವಮೊಗ್ಗ ನಗರದ ಇತಿಹಾಸದಲ್ಲಿಯೇ ಮೊದಲ ಬಾರಿಯಾಗಿ 'ಮೇ' ದಿನಾಚರಣೆ ಅಂಗವಾಗಿ ಸೈನ್ಸ್ ಮೈದಾನದಿಂದ ಸುಮಾರು 8 ಸಾವಿರ ಜನರ ಒಂದು ಬೃಹತ್ ಮೆರವಣಿಗೆ ಹೊರಟು ನಗರದ ಮುಖ್ಯ ಬೀದಿಗಳಲ್ಲಿ ಹಾದು ಸಂಜೆ 6-30 ಗಂಟೆಗೆ ನಗರಸಭಾ ಆವರಣದಲ್ಲಿ ಬಂದು ಸೇರಿತು. ಈ ಮೆರವಣಿಗೆಯಲ್ಲಿ ಅಕ್ಕಿ ಗಿರಣಿ ಮತ್ತು ಹಮಾಲಿ ಕಾರ್ಮಿಕರು, ರೈತರು, ರೈತ ಕಾರ್ಮಿಕರು, ಹೋಟೇಲ್, ಅಂಚೆ-ತಂತಿ, ಬ್ಯಾಂಕ್, ಎಲ್. ಐ. ಸಿ., ವಿದ್ಯುಚ್ಛಕ್ತಿ ಮಂಡಲಿ ನೌಕರರು ಮುಂತಾದವರು ಭಾಗವಹಿಸಿದ್ದರು. ನಗರಸಭಾ ಆವರಣದಲ್ಲಿ ಸೇರಿದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜನತಾ ಪಕ್ಷದ ಮುಖಂಡ ಶ್ರೀ ಜಿ. ಮಾದಪ್ಪ ವಹಿಸಿದ್ದರು. ಶ್ರೀ ಜಿ. ಎಸ್. ನಾಗರಾಜ್ ಎಲ್ಲರನ್ನು ಸ್ವಾಗತಿಸಿದರು. ನಗರಸಭಾಧ್ಯಕ್ಷ ಶ್ರೀ ಎಚ್. ಎಂ. ಚಂದ್ರಶೇಖರಪ್ಪನವರು ಶುಭಾಶಯ ಕೋರಿ ಮಾತನಾಡಿದರು. ಸ್ವಾಗತ ಸಮಿತಿಯಲ್ಲಿ ಬಿ. ಜೆ. ಪಿ. ಬಿಟ್ಟು ಎಲ್ಲಾ ರಾಜಕೀಯ ಪಕ್ಷದ ಮತ್ತು ಎಲ್ಲಾ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಸೇರಿದ್ದರು.

ಸ್ವಾಗತ ಸಮಿತಿಯ ಸಂಚಾಲಕರು ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ| ಚಂದುಕುಟ್ಟಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕುಂದಾಪುರ

ಜಗತ್ತಿನ ದುಡಿಯುವ ಜನ ಸಮುದಾಯದ ವರ್ಗ ಜಾಗೃತಿ ಹಾಗೂ ವರ್ಗ ಏಕತೆಯ ದಿನವಾದ ಮೇ ದಿನವನ್ನು ಕುಂದಾಪುರದಲ್ಲಿ ಸಿ. ಐ. ಟಿ. ಯು.ಗೆ ಸೇರಿದ ಎಲ್ಲಾ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಹೆಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು ಮತ್ತು ರಿಕ್ಷಾ ಚಾಲಕರು ಉತ್ಸಾಹದಿಂದ ಆಚರಿಸಿದರು. ಮೇ ಒಂದರಂದು ಬೆಳಿಗ್ಗೆ ಯುವಕರು ತಾಲ್ಲೂಕಿನ ಹೆಚ್ಚಿನ ಪ್ರದೇಶಗಳಿಗೆ ಸೈಕಲ್ ಮೆರವಣಿಗೆಯನ್ನು ನಡೆಸಿದರು. ಮಧ್ಯಾಹ್ನ 3 ಗಂಟೆಯ ಸಮಯ ಕುಂದಾಪುರದ ಗುಲ್ವಾಡಿ, ನೆಲ್ಲಿಕಟ್ಟೆ, ಪಡುಕೋಣೆ ಗಂಗೊಳ್ಳಿ, ಹಂಗಾರಕಟ್ಟೆ ಹಾಗೂ ಇತರ ಪ್ರದೇಶಗಳಿಂದ ಕಾರ್ಮಿಕರು ಹಾಗೂ ಕೃಷಿ ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟು, ಸಂಜೆ 6 ಗಂಟೆಗೆ ಸರಿಯಾಗಿ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆಗೆ ಬಂದು ಸೇರಿದರು. ಮೆರವಣಿಗೆಯಲ್ಲಿ ಕೆಂಪು ಸ್ವಯಂಸೇವಕರು ಮತ್ತು ಮಹಿಳೆಯರು ಇದ್ದು ಹೆಚ್ಚಿನ ಆಕರ್ಷಣೀಯವಾಗಿತ್ತು.

ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾ|| ಸಿ. ನಾರಾಯಣ ಅವರು ವಹಿಸಿದ್ದರು. ಕಾ| ಶಿವಾನಂದ ಕೋಡಿ ಇವರು ಸ್ವಾಗತ ಭಾಷಣ ಮಾಡಿದರು. ಸಭೆಯನ್ನುದ್ದೇಶಿಸಿ ದಕ್ಷಿಣ ಕನ್ನಡ ಜಿಲ್ಲಾ ಸಿ.ಐ.ಟಿ.ಯು.ವಿನ ಕಾರ್ಯದರ್ಶಿಯವರಾದ ಕಾ| ಕೆ. ಶಂಕರ್ ಅವರು ಮೇ ದಿನದ ಮಹತ್ವದ ಬಗ್ಗೆ ಮಾತನಾಡಿ, ಈ ವರ್ಷದ ಮೇ ದಿನಾಚರಣೆಯ ಸಂದರ್ಭದಲ್ಲಿ ರಾಷ್ಟ್ರೀಯ, ಆರ್ಥಿಕ, ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಕಾರ್ಮಿಕ ವರ್ಗ ನಿರ್ಣಾಯಕ ಪಾತ್ರವಹಿಸುವ ನಿಟ್ಟಿನಲ್ಲಿ ಪ್ರತಿಜ್ಞೆಯನ್ನು ಕೈಗೊಳ್ಳಬೇಕೆಂದು ಹೇಳಿದರು.

ಸಭೆಯನ್ನುದ್ದೇಶಿಸಿ ಕಾ| ಬಿ. ಮಾಧವ, ಕಾ| ಅಬ್ರಹಾಂ ಕರ್ಕಡ ಮುಂತಾದವರು ಮಾತನಾಡಿದರು.

ಉಡುಪಿ :

ಉಡುಪಿಯ ಎಲ್ಲಾ ಕಾರ್ಮಿಕ, ನೌಕರರ ಸಂಘಗಳು ಜತೆಯಾಗಿ ಮೇ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಿದರು.

ಸಂಜೆ ವಿವಿಧ ಕೇಂದ್ರಗಳಿಂದ ಬಂದ ಮೆರವಣಿಗೆಗಳು ಉಡುಪಿಯಲ್ಲಿ ಜತೆ ಸೇರಿ ಬೃಹತ್ ಪ್ರದರ್ಶನ ನಡೆಸಿ "ವಿಶ್ವದ ಕಾರ್ಮಿಕರೆ ಒಗ್ಗಟ್ಟಾಗಿರಿ" ಎಂಬ ಘೋಷಣೆ ಮೊಳಗಿಸಿದರು.

ನಂತರ ಜರುಗಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸರ್ಕಾರಿ ನೌಕರರ ಸಂಘ ಉಡುಪಿ, ಇದರ ಕಾರ್ಯದರ್ಶಿಯವರಾದ ಕಾಮ್ರೇಡ್ ಎಸ್. ಎಸ್. ಶೆಣೈಯವರು ವಹಿಸಿದ್ದರು.

ಬ್ಯಾಂಕ್ ನೌಕರರ ಬೇರೆ ಬೇರೆ ಸಂಘಟನೆಗಳ ಪರವಾಗಿ ಕಾ| ಪಿ ವಿಶ್ವನಾಥ ರೈ, ಕಾ| ಎಂ. ಆರ್. ಆಚಾರ್ ಕಾ| ಭಗವಾನ್‌ದಾಸ್, ಎ. ಐ. ಟಿ. ಯು. ಸಿ. ಯ ಹಿರಿಯ ಮುಂದಾಳು ಕಾ| ಕೆ. ದಾಸ ಸೇರಿಗಾರರು, ಸಿ. ಐ. ಟಿ. ಯು. ಪರವಾಗಿ ಕಾ| ಡೇವಿಡ್ ಎ. ಕರ್ಕಡ ಮೊದಲಾದವರು ಮೇ ದಿನದ ಸಂದರ್ಭದಲ್ಲಿ ಕಾರ್ಮಿಕವರ್ಗದ ಜವಾಬ್ದಾರಿಯನ್ನು ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಶೆಣೈಯವರು ಮಾತನಾಡುತ್ತಾ "ಕಾರ್ಮಿಕ ನೌಕರರು ಭಿನ್ನತೆಗಳನ್ನು ಮೀರಿ ಐಕ್ಯ ಕಾರ್ಯಾಚರಣೆಯ ಮೂಲಕ ಸೌಹಾರ್ದತೆ ಬೆಳೆಸಬೇಕೆಂದರು"

ರಾಜ್ಯದ ಇನ್ನೂ ಹಲವಾರು ಭಾಗಗಳಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಗಿದೆಯೆಂದು ವರದಿಯಾಗಿದೆ.

ಮೇ ೧೫ ರಂದು ಶಿವಮೊಗ್ಗದಲ್ಲಿ

ಮಾರ್ಕ್ಸ್ ಕುರಿತು ವಿಚಾರ ಸಂಕಿರಣ

[ಶಿವಮೊಗ್ಗದಲ್ಲಿ ಮೇ 15 ರಂದು ಮಾರ್ಕ್ಸ್ ಮರಣ ಶತಾಬ್ಧಿ ಆಚರಣಾ ಸಮಿತಿಯು ಕಾರ್ಲ್ ಮಾರ್ಕ್ಸ್‌ರ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಿದೆ. ಈ ಕುರಿತು ಸಿ. ಆರ್. ಭಟ್‌ರವರು ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದ್ದಾರೆ.]

1983 ಮಾರ್ಚ್ 14 ರಂದು ವಿಶ್ವದ ಎಲ್ಲಾ ಶೋಷಿತ ಜನತೆಯ ಶ್ರೇಷ್ಠ ದಾರ್ಶನಿಕ, ಸಮಾಜ ವಿಜ್ಞಾನಿ ಕ್ರಾಂತಿಕಾರಿ ಹಾಗೂ ಮಾನವತಾವಾದಿ ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ಧಿಯ ದಿನ. ಅಂದಿನಿಂದ ಒಂದು ವರ್ಷದವರೆಗೆ ಜಗತ್ತಿನಾದ್ಯಂತ ಮಾರ್ಕ್ಸ್ ಮರಣ ಶತಾಬ್ಧಿಯನ್ನು ಆಚರಿಸಲಾಗುವುದು. ನಮ್ಮ ದೇಶದ ಹಾಗೂ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಈ ಶತಾಬ್ಧಿಯನ್ನು ವೈವಿಧ್ಯತೆಯಿಂದ ಆಚರಿಸಲಾಗುತ್ತಿದೆ. ಪ್ರಜಾಪ್ರಭುತ್ವವಾದಿ ಹಾಗೂ ಪುರೋಗಾಮಿ ಆಚಾರ ವಿಚಾರಗಳಿಗೆ ಹೆಸರು ಪಡೆದ ಶಿವಮೊಗ್ಗದಲ್ಲಿಯೂ ಸದ್ಯದಲ್ಲಿಯೇ ಮಾರ್ಕ್ಸ್ ಮರಣ ಶತಾಬ್ಧಿಯನ್ನು ಆಚರಿಸಲು ಅನೇಕರು ಆಸಕ್ತರಾಗಿದ್ದಾರೆ. ಅದಕ್ಕಾಗಿ ವಿಶಾಲ ತಳಹದಿಯ ಒಂದು ವಿಶೇಷ ಸಮಿತಿ ಸಹ ರೂಪುಗೊಂಡಿದೆ.

ಮಾರ್ಕ್ಸ್‌ವಾದ ಅಂದಿನಿಂದ ಇಂದಿನವರೆಗೂ ಎಷ್ಟು ಅರ್ಥಪೂರ್ಣವಾಗಿದೆ ಎಂದು ಅರಿತುಕೊಳ್ಳುವುದು ಈಗ ಸಮಂಜಸವಾಗಿದೆ. ಆದುದರಿಂದ ಮಾರ್ಕ್ಸ್ ಮರಣ ಶತಾಬ್ಧಿಯ ಆಚರಣೆಯ ಅಂಗವಾಗಿ ಅವರ ಬದುಕು, ಬರಹ ಮತ್ತು ಲೋಕ ದೃಷ್ಟಿಯ ಕುರಿತು ದಿ. 15-5-83 ರಂದು ವಿಚಾರ ಸಂಕಿರಣ ನಡೆಯಲಿದೆ. ಸ್ಥಳ : ಗಾಂಧಿ ಮಂದಿರ, ನೆಹರೂ ರಸ್ತೆ, ಶಿವಮೊಗ್ಗ ಸಮಯ: ಬೆಳಿಗ್ಗೆ 9-30 ರಿಂದ ಸಂಜೆ 5-30ರ ವರೆಗೆ.

ವಿಚಾರ ಸಂಕಿರಣದಲ್ಲಿ ಪ್ರಬಂಧಕಾರರಾಗಿ, ಉಪನ್ಯಾಸಕರಾಗಿ ಭಾಗವಹಿಸಲು ಡಾ|| ಜಿ. ರಾಮಕೃಷ್ಣ, ನ್ಯಾಷನಲ್ ಕಾಲೇಜು, ಬೆಂಗಳೂರು,

(6ನೇ ಪುಟ ನೋಡಿ)

[ಕಾನ್‌ಪುರದಲ್ಲಿ ನಡೆದ ಸಿ.ಐ.ಟಿ.ಯು. ೫ನೇ ಸಮ್ಮೇಳನಕ್ಕೆ ಪ್ರಧಾನ ಕಾರ್ಯದರ್ಶಿ ಕಾ॥ ಪಿ. ರಾಮಮೂರ್ತಿಯವರು ಸಲ್ಲಿಸಿದ ವರದಿಯ ಸಾರಾಂಶ]

ನಮ್ಮ ಕಳೆದ ಸಮ್ಮೇಳನ ಮದ್ರಾಸಿನಲ್ಲಿ ನಡೆದು ನಾಲ್ಕು ವರ್ಷಗಳಾಗಿವೆ. ಈ ಅವಧಿಯಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಹಲವಾರು ತಿರುವುಮುರುವುಗಳಾಗಿವೆ. ಈ ಅವಧಿಯ ಪ್ರಮುಖ ಬೆಳವಣಿಗೆಗಳಿಂದ ಕೂಡಿದ್ದು ಸಾರ್ವತ್ರಿಕ, ಮಿನಿ ಸಾರ್ವತ್ರಿಕ ಚುನಾವಣೆಗಳಲ್ಲದೆ ಅನೇಕ ರಾಜ್ಯಗಳಲ್ಲಿ ಚುನಾವಣೆ ನಡೆದಿದೆ. ಎಲ್ಲ ಬಂಡವಾಳಶಾಹಿ ದೇಶಗಳಲ್ಲೂ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಯುದ್ಧದ ಭೀತಿ ಅಧಿಕವಾಗುತ್ತಿದ್ದು ದುಡಿಯುವ ವರ್ಗದ ಮೇಲೆ ಧಾಳಿ ಹೆಚ್ಚುತ್ತಿದೆ. ಶಾಂತಿಯ ರಕ್ಷಣೆಗಾಗಿ ಜೀವನ ಮಟ್ಟದ ಹಾಗೂ ಕಾರ್ಮಿಕ ಸಂಘದ ಮತ್ತು ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ದುಡಿಯುವ ವರ್ಗ ನಿರಂತರ ಹೋರಾಟದಲ್ಲಿ ತೊಡಗಿದೆ. ಇವೆಲ್ಲ ಪ್ರಸ್ತುತ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಶ್ರಮಜೀವಿಗಳ ಜಾಗತಿಕ ಹೋರಾಟದ ವಿವಿಧ ಮುಖಗಳಾಗಿವೆ.

ತೀವ್ರಗೊಳ್ಳುತ್ತಿರುವ ಯುದ್ಧದ ಅಪಾಯ

ಅಮೆರಿಕ ತನ್ನ ಅಣುಶಸ್ತ್ರಾಸ್ತ್ರ ನೀತಿಯನ್ನು ತೀವ್ರಗೊಳಿಸಿ ಸಾಮೂಹಿಕವಾಗಿ ನಾಶಗೊಳಿಸುವ ಅಸ್ತ್ರಗಳನ್ನು ನಿರ್ಮಿಸುತ್ತಿದೆ. ಅಲ್ಲದೆ ಸಮಾಜವಾದಿ ದೇಶಗಳನ್ನು ನಾಶಗೊಳಿಸುವ ಮತ್ತು ಜಗತ್ತನ್ನೇ ತನ್ನ ಅಂಕೆಯಲ್ಲಿಟ್ಟುಕೊಳ್ಳುವಂತೆ ಜಗತ್ತಿನಾದ್ಯಂತ ಮಿಲಿಟರಿ ನೆಲೆಗಳನ್ನು ನಿರ್ಮಿಸುತ್ತಿದೆ. ಈ ಬೆಳವಣಿಗೆಯನ್ನು ನಿಯಂತ್ರಿಸುವ ರಷ್ಯಾದ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸಲಾಗುತ್ತಿದೆ. ಪರಿಣಾಮವಾಗಿ ಶಸ್ತ್ರಾಸ್ತ್ರಗಳ ಪೈಪೋಟಿ ತೀವ್ರಗೊಂಡಿದೆ. ಈ ಪರಿಸ್ಥಿತಿಯಲ್ಲಿ ಯುದ್ಧದ ಭೀಕರತೆ ಮನದಟ್ಟು ಮಾಡಲು ಮತ್ತು ಶಾಂತಿಗಾಗಿನ ಚಳುವಳಿಯನ್ನು ಬೆಳೆಸಲು ಅಗತ್ಯವಾದ ಪ್ರಚಾರ ಕಾರ್ಯ ಕೈಗೊಳ್ಳಬೇಕು. ನಮ್ಮ ಕಾರ್ಮಿಕರು ಮತ್ತು ಜನತೆ ಜಾಗತಿಕವಾದ ಯುದ್ಧ ವಿರೋಧಿ ಮತ್ತು ಶಾಂತಿಗಾಗಿನ ಚಳುವಳಿಗಳಲ್ಲಿ ಪ್ರಧಾನ ಪಾತ್ರ ವಹಿಸಬೇಕಾಗಿದೆ.

ನವ ವಸಾಹತುಶಾಹಿಯ ಕೊಳ್ಳೆ

ಬಂಡವಾಳಶಾಹಿ ದೇಶಗಳಲ್ಲಿ ದಿನದಿಂದ ದಿನಕ್ಕೆ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿದೆ. ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಕೂಡ 1930ರ ಮಹಾ ಮುಗ್ಗಟ್ಟನ್ನು ನೆನಪಿಗೆ ತರುವಂತಿದೆಯೆಂದು ಒಪ್ಪುತ್ತಾರೆ. ಮುಂದುವರಿದ ಬಂಡವಾಳಶಾಹಿ ದೇಶಗಳ ಆಳುವ ವರ್ಗ ತನ್ನ ಹೊರೆಯನ್ನು ಮುಂದುವರಿಯುತ್ತಿರುವ ದೇಶಗಳ ಮೇಲೆ ಮತ್ತು ಅಲ್ಲಿನ ಕಾರ್ಮಿಕರ ಮೇಲೆ ವರ್ಗಾಯಿಸಲು ನಿರಂತರವಾಗಿ ಪ್ರಯತ್ನಿಸುತ್ತಿವೆ. ತಮ್ಮ ಮಾರುಕಟ್ಟೆ ಕುರಿತಂತೆ ರಕ್ಷಣಾ ನೀತಿ ಮತ್ತು ಅಸಮಾನ ವ್ಯವಹಾರವನ್ನು ಅಭಿವೃದ್ಧಿಶೀಲ ದೇಶಗಳ ಮೇಲೆ ಹೇರುವುದು ಅವರ ಪ್ರಮುಖ ಅಸ್ತ್ರಗಳಾಗಿವೆ. ಇವುಗಳನ್ನು ಇನ್ನಷ್ಟು ತೀವ್ರವಾಗಿ ಹೇರುತ್ತಿದ್ದಾರೆ. ಅಭಿವೃದ್ಧಿಶೀಲ ದೇಶಗಳ ಆಳುವ ವರ್ಗಗಳೂ ಕೂಡ ಅದನ್ನು ಸಾಂಕೇತಿಕವಾಗಿ ಪ್ರತಿಭಟಿಸುವಂತಾಗಿದೆ ಮತ್ತು ಸಾಮ್ರಾಜ್ಯಶಾಹಿಗಳ ಈ ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಧ್ವನಿ ಎತ್ತುತ್ತಿವೆ.

'ರಫ್ತು ಇಲ್ಲವೇ ನಾಶ' ಎಂಬ ಭಾರತ ಸರ್ಕಾರದ ಘೋಷಣೆ ಸಾಮ್ರಾಜ್ಯಶಾಹಿಗಳನ್ನು ಸಂತೈಸಲೆಂದು ನಾವು ಹೇಳಿದ್ದನ್ನು ಸ್ಮರಿಸಬಹುದು. ನವ ವಸಾಹತುಶಾಹಿಗಳ ಲೂಟಿಗೆ ಜನತೆ ಕಣ್ಣುಚ್ಚುವಂತೆ ಇದು ಮಾಡಿತು. ಅನೇಕ ಸಂದರ್ಭಗಳಲ್ಲಿ ರಿಯಾಯಿತಿ ಮತ್ತು ಸಬ್ಸಿಡಿ ನೀಡುವ ಈ ನೀತಿ ದೇಶದ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸುತ್ತದೆಂದು ಎಚ್ಚರಿಕೆ ನೀಡಿದ್ದೆವು. ಎಚ್ಚರಿಕೆ ನಿಜವಾಗಿದೆ. ಈ ಅಸಮಾನ ವ್ಯವಹಾರದ ಪರಿಣಾಮವಾಗಿ ಐದನೇ ಯೋಜನೆಯ ಐದು ವರ್ಷಗಳಲ್ಲಿ 5000ಕೋಟಿ ರೂ.ಗಳನ್ನು ಇಂಡಿಯಾ ಕಳೆದುಕೊಂಡಿದೆಯೆಂದು ಆರನೇ ಯೋಜನೆಯ ದಾಖಲೆಗಳು ಬಹಿರಂಗಗೊಳಿಸಿವೆ.

ಅರ್ಥ ವ್ಯವಸ್ಥೆಯ ಮೇಲೆ ಭೀಕರ ಪರಿಣಾಮಗಳು

ಪರಿಣಾಮವಾಗಿ ನಾವು ನಮ್ಮ ತಲೆಯನ್ನು ನೇಣಿನ ಕುಣಿಕೆಗೆ ಒಡ್ಡಿರುವುದನ್ನು ಕೆಲವು ಮಂತ್ರಿಗಳು ಮತ್ತು ಉನ್ನತ ಕೈಗಾರಿಕೋದ್ಯಮಿಗಳು ಒಪ್ಪುತ್ತಾರೆ. ಅಲಿಪ್ತ ಚಳುವಳಿಯ ಏಳನೇ ಸಮ್ಮೇಳನದಲ್ಲೂ ಈ ಶರತ್ತುಗಳನ್ನು ವಿರೋಧಿಸಿ ತೀವ್ರಧ್ವನಿ ಎತ್ತಲಾಯಿತು. ಮದ್ರಾಸ್ ಛೇಂಬರ್ ಆಫ್ ಕಾಮರ್ಸನ್ನು ಉದ್ದೇಶಿಸಿ ಮಾತನಾಡುತ್ತ ಕೇಂದ್ರ ಹಣಕಾಸು ಮಂತ್ರಿ ಶ್ರೀ ಪ್ರಣಬ್‌ಮುಖರ್ಜಿ ಕಳೆದ ವರ್ಷ 2000ರೂ. ಕೋಟಿ ಮೊತ್ತದ ಅನವಶ್ಯಕ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಯಿತೆಂದು ಹೇಳಿದ್ದಾರೆ. ನಮ್ಮ ಖೋತಾ ವಿದೇಶಿ ವ್ಯವಹಾರವನ್ನು ಸರಿತೂಗಿಸಲು ಇಂತಹ ಆಮದುಗಳನ್ನು ನಿಷೇಧಿಸುವುದರ ಬದಲು, ರಫ್ತನ್ನು ಹೆಚ್ಚಿಸಲು ಮತ್ತು ವಿದೇಶಿ ವಿನಿಮಯದ ಕೊರತೆಯನ್ನು ನೀಗಲು ಕಾರ್ಮಿಕರು ಅಧಿಕ ಉತ್ಪಾದನೆ ಮಾಡಬೇಕೆಂದು ಪ್ರಚಾರ ಮುಂದುವರಿದಿದೆ. ಆಮದು ನೀತಿಯನ್ನು ಸಡಿಲಗೊಳಿಸಿದ್ದರ ಪರಿಣಾಮವಾಗಿ ಹಲವಾರು ಕಾರ್ಖಾನೆಗಳು ತಮ್ಮ ಉತ್ಪಾದನೆಯನ್ನು ಕಡಿತಗೊಳಿಸಿವೆ ಮತ್ತು ಸಂಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುತ್ತಿಲ್ಲ. ವಿದೇಶಗಳಿಂದ ಕಡಿಮೆ ಬೆಲೆಗೆ ಸೋಡಾ ಆಷನ್ನು ದೇಶದಲ್ಲಿ ಸುರಿಯುತ್ತಿರುವುದರ ಪರಿಣಾಮವಾಗಿ ನಮ್ಮಲ್ಲಿನ ಅನೇಕ ಸೋಡಾ ಆಷ್ ಕಾರ್ಖಾನೆಗಳು ಶೇಕಡ 50ಕ್ಕಿಂತ ಹೆಚ್ಚು ಉತ್ಪಾದನೆಯನ್ನು ಕಡಿತಗೊಳಿಸಿವೆ. ಇದರಿಂದಾಗಿ ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ, ಮನುಷ್ಯ ನಿರ್ಮಿತ ನೂಲಿನ ಆಮದು ಐ. ಎಂ. ಎಫ್. ಸಾಲದಿಂದೀಚೆಗೆ ವಿದೇಶಗಳು ಈ ನೂಲನ್ನು ಕಡಿಮೆ ಬೆಲೆಗೆ ಒಡ್ಡುತ್ತಿರುವುದರಿಂದಾಗಿ ತಮಿಳುನಾಡಿನ ಕೊಯಂಬತ್ತೂರು ಜಿಲ್ಲೆಯ ಮೆಟ್ಟುಪಾಳ್ಯಂ ವಿಸ್‌ಕೋಸ್ ಕಾರ್ಖಾನೆಯನ್ನು ಕೆಲದಿನ ಮುಚ್ಚಲಾಯಿತು. ನಂತರ ಅದರ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆ ಉತ್ಪಾದನೆಯಲ್ಲಿ ತೊಡಗಿದೆ. ಬಿರ್ಲಾಗಳಿಗೆ ಸಂಬಂಧಿಸಿದ

ದೇಶದ ಕಾರ್ಮಿಕರ ಚಳುವಳಿಯಲ್ಲಿ

ಕೇರಳದ ಮಾವೂರ್‌ನ ಕಾರ್ಖಾನೆ ಮನುಷ್ಯ ನಿರ್ಮಿತ ನೂಲಿನ ಉತ್ಪಾದನೆಗೆ ಬೇಕಾದ ಪಲ್ಪ್ ತಯಾರಿಸುತ್ತಿದ್ದು ಅದರ ಅವಶ್ಯಕತೆಯಿಲ್ಲದಿರುವುದರಿಂದಾಗಿ ಮುಚ್ಚಲಾಗಿದೆ. ಕಡಿಮೆ ಬೆಲೆಗೆ ಈ ನಾರನ್ನು ಆಮದು ಮಾಡಿಕೊಳ್ಳಬಹುದಾದ್ದರಿಂದ ಇಲ್ಲಿನ ಹಲವಾರು ಕಾರ್ಖಾನೆಗಳನ್ನು ಮುಚ್ಚಿರುವ ಉದಾಹರಣೆಯನ್ನು ನೀಡಬಹುದು. ನಮ್ಮ ಪಾಲಿಯೆಸ್ಟರ್ ನೂಲಿನ ಮತ್ತು ಫಿಲಮೆಂಟ್ ನೂಲಿನ ಕಾರ್ಖಾನೆಗಳು ಮುಚ್ಚಲಾಗಿವೆ. ಇಲ್ಲವೇ ಭಾಗಶಃ ಕೆಲಸ ಮಾಡುತ್ತಿವೆ. ಆಮದು ಮಾಡಿಕೊಂಡ ನೂಲು ಅಗ್ಗವೆಂದು ಕೆಲವು ದಿನಗಳ ಹಿಂದೆ ಕೋಟಾದ ಜೆ. ಕೆ. ಸಿಂಥೆಟಿಕ್ಸ್‌ನಲ್ಲಿ 2400 ಜನ ಕೆಲಸಗಾರರನ್ನು ವಜಾ ಮಾಡಲಾಯಿತು.

ನಮ್ಮ ಆರ್ಥಿಕ ಪರಿಸ್ಥಿತಿಯು ಹಲವಾರು ತೊಂದರೆಗಳನ್ನು ಎದುರಿಸುತ್ತಿದೆ. ರಾಜ್ಯಗಳಲ್ಲಿ ಶಕ್ತಿಯ ಕೊರತೆಯಿದೆ. ತಮಿಳುನಾಡಿನಲ್ಲಿ ಶೇಕಡ ನೂರು ವಿದ್ಯುಚ್ಛಕ್ತಿಯ ಕಡಿತದಿಂದಾಗಿ ಕಾರ್ಖಾನೆಗಳಲ್ಲಿನ ಸುಮಾರು ಒಂದು ಮಿಲಿಯನ್ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಲೇ ಆಫ್ ಮಾಡಲಾಗಿದೆ. ಅಂತೆಯೇ ಕರ್ನಾಟಕದಲ್ಲೂ ಕಡಿತವಿದೆ, ಗುಜರಾತಿನಲ್ಲಿ ವಿದ್ಯುಚ್ಛಕ್ತಿಯ ಕೊರತೆಯಿದ್ದು ಕೆಲವೊಮ್ಮೆ ಶೇಕಡ ನೂರನ್ನು ಮುಟ್ಟುತ್ತದೆ. ರಾಜಸ್ಥಾನ ಬಿಹಾರಗಳಲ್ಲೂ ಕೊರತೆಯಿದೆ. ರಾಜ್ಯಗಳು ವಿದ್ಯುಚ್ಛಕ್ತಿಯ ಕೊರತೆಯನ್ನು ಎದುರಿಸುತ್ತಿದ್ದು ಕಾರ್ಖಾನೆಗಳು ತಮ್ಮ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುತ್ತಿಲ್ಲ. ಕಾರ್ಖಾನೆಗಳು ಪಾಳಿಗಳಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿದ್ದು ಲಕ್ಷಾಂತರ ಜನ ಕೆಲಸದಿಂದ ಹೊರಹಾಕಲ್ಪಟ್ಟಿದ್ದಾರೆ.

ಈ ಬಿಕ್ಕಟ್ಟಿನ ಪರಿಣಾಮದಿಂದ ಅರ್ಥ ವ್ಯವಸ್ಥೆಯ ಯಾವುದೇ ವಿಭಾಗವೂ ತಪ್ಪಿಸಿಕೊಳ್ಳುವಂತಿಲ್ಲ. ಕೇರಳದ ಸಾಂಪ್ರದಾಯದ ಕೈಗಾರಿಕೆಗಳು, ಕೈಮಗ್ಗ, ಗೇರು, ನಾರಿನ ಕೈಗಾರಿಕೆಗಳು, ಸಂಕಷ್ಟದಲ್ಲಿವೆ. ಹತ್ತಿ ಮತ್ತಿನ್ನಿತರ ಎಲ್ಲ ವಾಣಿಜ್ಯ ಬೆಳೆಗಳ ಬೆಲೆಗಳು ಮುಗ್ಗರಿಸಿದ್ದು ರೈತರು ದಿವಾಳಿಕೋರರಾಗುತ್ತಿದ್ದಾರೆ. ಹತ್ತಿಯ ಬೆಲೆ ಮೂರನೇ ಒಂದರಷ್ಟು ಕೆಳಗಿಳಿದಿದ್ದರೂ ಹತ್ತಿ ನೂಲಿನ ಬೆಲೆ ಶೇಖಡ 50 ರಷ್ಟು ಏರಿದೆ. ದೇಶದಾದ್ಯಂತ ಕೈಮಗ್ಗದ ನೇಕಾರರು ತಮ್ಮ ಉದ್ಯೋಗ ತ್ಯಜಿಸುತ್ತಿದ್ದಾರೆ. ತಮಿಳುನಾಡಿನ ಕೈಮಗ್ಗ ಕೇಂದ್ರಗಳಲ್ಲಿ ನೂಲಿನ ಬೆಲೆ ಇಳಿಸಲು ಹೋರಾಟ ನಡೆಸುತ್ತಿದ್ದು ಗುಂಡು ಮತ್ತು ಲಾಠಿಯನ್ನು ಎದುರಿಸುತ್ತಿದ್ದಾರೆ. ನೂರಾರು ಇನ್ನಿತರ ಕಾರ್ಖಾನೆಗಳು ಮುಚ್ಚುತ್ತಿವೆ, ಉದಾಹರಣೆಗೆ ಮದ್ರಾಸಿನ ಲಾರಿ ಕಾರ್ಖಾನೆ ಅಶೋಕ ಲೇಲಾಂಡ್ ತನ್ನ ಒಂದು ಪಾಳಿಯನ್ನು ನಿಲ್ಲಿಸಿದೆ; ಸಾವಿರಾರು ಕಾರ್ಮಿಕರು ಹೊರಹಾಕಲ್ಪಟ್ಟಿದ್ದಾರೆ. ಅಶೋಕ ಲೇಲಾಂಡ್ ಮತ್ತು ಆಟೋಮೊಬೈಲ್ ಕೈಗಾರಿಕೆಗಳನ್ನು ಅವಲಂಭಿಸಿರುವ ಚಿಕ್ಕಪುಟ್ಟ ಕಾರ್ಖಾನೆಗಳು ದೇಶದಾದ್ಯಂತ ಸಂಕಷ್ಟಕ್ಕೊಳಗಾಗಿವೆ; ಪಾಳಿಗಳನ್ನು ನಿಲ್ಲಿಸುತ್ತಿದ್ದು ಸಾವಿರಾರು ಕೆಲಸಗಾರರು ಹೊರಹಾಕಲ್ಪಡುತ್ತಿದ್ದಾರೆ.

ಉಕ್ಕಿನ ಪರಿಸ್ಥಿತಿಯನ್ನು ಪರಿಗಣಿಸುವ, ಉಕ್ಕಿನ ಉತ್ಪಾದನೆ ಹೆಚ್ಚಾಗಿದೆ. ಆದರೆ ಆಮದು ಮಾಡಿಕೊಳ್ಳುತ್ತಿದ್ದೇವೆ. ಗೋದಾಮುಗಳಲ್ಲಿ ಮಾರದೆ ಉಳಿದಿರುವ ಉಕ್ಕು ಹೆಚ್ಚುತ್ತಿದೆ. ದೇಶದಲ್ಲಿನ ಉಕ್ಕಿನ ಉತ್ಪಾದನೆ ಮಿತಿಮೀರಿದೆ. ಆದರೂ ಐ.ಎಂ.ಎಫ್ ಸಾಲ ತೆಗೆದುಕೊಳ್ಳುವಾಗ ಸರ್ಕಾರ ಬದ್ಧವಾಗಿರುವುದರಿಂದಾಗಿ ಉಕ್ಕಿನ ಉತ್ಪಾದನೆಯಲ್ಲಿ ಭಾರಿ ಏರಿಕೆಯಿದ್ದರೂ ಮತ್ತು ಮಾರದೆಬಿದ್ದಿರುವ ಉಕ್ಕಿನ ರಾಶಿಯಿದ್ದರೂ ಆಮದು ನೀತಿಯನ್ನು ಸಡಿಲಗೊಳಿಸಿ ಉಕ್ಕನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ.

ಭೂ ಸುಧಾರಣೆಯ ವಿಫಲತೆ

ಬಹುರಾಷ್ಟ್ರೀಯ ಸಂಸ್ಥೆಗಳ, ಏಕಸ್ವಾಮ್ಯಗಳ ಪರವಾದ ನೀತಿಯಿಂದಾಗಿ ದುಡಿಯುವ ಜನತೆ ಬಡವರಾಗಿರುವುದಲ್ಲದೆ ಇನ್ನೊಂದು ನೇರ ಕಾರಣವೆಂದರೆ ಭಾರತ ಸರ್ಕಾರದ ಭೂಮಾಲೀಕ ಪರ ನೀತಿಯನ್ನು ಅನುಸರಿಸುತ್ತಿರುವುದು ಮತ್ತು ಭೂ ಸುಧಾರಣೆಯನ್ನು ಜಾರಿಗೊಳಿಸಲು ವಿಫಲವಾಗಿರುವುದು. ಈ ದೇಶದ ಭೂ ಸುಧಾರಣೆ ಮತ್ತು ಭೂಮಿಗೆ ಸಂಬಂಧಿಸಿದ ಶಾಸನಗಳಿಗೇನಾಗಿದೆ? ಇವುಗಳು ನೆಲೆಯಿಲ್ಲದ ಶಾಸನಗಳಾಗಿವೆ. ಈ ದೇಶದಲ್ಲಿ ಭೂಸುಧಾರಣೆಗಳನ್ನು ಜಾರಿಗೊಳಿಸಿರುವುದನ್ನು ಪರಿಶೀಲಿಸಲು ಬಂದ ಲಾಡ್‌ಜಿನಸ್ಕಿಯ ನೇತೃತ್ವದ ವಿದೇಶಿ ಪರಿಣತರ ವರದಿಯು ಸ್ಪಷ್ಟಗೊಳಿಸುವಂತೆ ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ ಒಕ್ಕಲೆಬ್ಬಿಸಿರುವ ರೈತರುಗಳ ಸಂಖ್ಯೆ, ಸ್ವಾತಂತ್ರ್ಯ ಪೂರ್ವದ ಒಂದೂವರೆ ಶತಕದಲ್ಲಿ ಒಕ್ಕಲೆಬ್ಬಿಸಿದ ರೈತರುಗಳ ಸಂಖ್ಯೆಗಿಂತ ಅಧಿಕವಾಗಿದೆ. ಒಂದಲ್ಲಾ ಒಂದು ನೆಪದಿಂದ ಬಡ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಯೋಜನಾ ಆಯೋಗದ ಸಿಬ್ಬಂದಿಯೇ ಹೇಳುವಂತೆ ರಾಜಕೀಯ ಇಚ್ಛೆಯ ಅಭಾವದಿಂದಾಗಿಯೇ ಕೃಷಿ ಕೂಲಿಗಾರರ ಹಾಗೂ ಬಡ ವಿಭಾಗಗಳ ಅನುಕೂಲಕ್ಕಾಗಿಯೇ ಮಾಡಿದ ಶಾಸನಗಳನ್ನು ಜಾರಿಗೊಳಿಸಲಾಗಿಲ್ಲ. 'ರಾಜಕೀಯ ಇಚ್ಛೆಯ ಅಭಾವ' ಎಂಬ ಪದಗಳನ್ನು ನಾನಿಲ್ಲಿ ಒತ್ತಿ ಹೇಳುತ್ತಿದ್ದೇನೆ. ಅಲ್ಲದೆ ಭೂಮಾಲೀಕರು ನೂರಾರು ರೀತಿಯಲ್ಲಿ ಸ್ಥಳೀಯ ಆಡಳಿತದೊಂದಿಗೆ, ಪೋಲೀಸರೊಂದಿಗೆ ಹಾಗೂ ರೆವಿನ್ಯೂ ಆಡಳಿತದೊಂದಿಗೆ ಸಂಬಂಧ ಹೊಂದಿರುತ್ತಾರೆ. ಇದರಿಂದಾಗಿ ಮತ್ತು ಅಧಿಕಾರದಲ್ಲಿರುವ ಪಕ್ಷದ ರಾಜಕೀಯ ಇಚ್ಛೆಯ ಅಭಾವದಿಂದ ಭೂ ಶಾಸನಗಳು ಭೂಮಿತಿ ಶಾಸನಗಳು ಕೇವಲ ಕಾಗದದ ಮೇಲೆ ಉಳಿದಿವೆ.

ಬೂರ್ಜ್ವಾಗಳ ಹಾಗೂ ಭೂಮಾಲೀಕರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಈ ಸರ್ಕಾರಗಳು ಹೇಗೆ ತಾನೆ ಭೂ ಸುಧಾರಣಾ ಶಾಸನಗಳನ್ನು ಜಾರಿಗೊಳಿಸುವ ರಾಜಕೀಯ ಇಚ್ಛೆಯನ್ನು ಪಡೆಯಲು ಸಾಧ್ಯ? ರಾಜ್ಯಗಳಲ್ಲಿನ ಬಹುತೇಕ ಮಂತ್ರಿಗಳು ಹಾಗೂ ಕಾಂಗ್ರೆಸ್ (ಐ)ನ ಸರ್ಕಾರವಿರುವ ರಾಜ್ಯಗಳಲ್ಲಿನ ಶಾಸಕರುಗಳೇ ಭೂಮಾಲೀಕರಾಗಿದ್ದಾರೆ. ಅವರುಗಳು ಯಾವಾಗಲಾದರೂ ತಮ್ಮ ಭೂಮಿಯನ್ನು ಬಿಟ್ಟುಕೊಡಲು ಸಿದ್ಧರಾಗುವರೆ?

ಆದ್ದರಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿನ ನಮ್ಮ ಸಹೋದರರು ಈ ನೀತಿಯ ಹೀನ ಬಲಿಪಶುಗಳಾಗಿದ್ದಾರೆ. ಭೂಮಿಗಾಗಿನ, ಕನಿಷ್ಟ ಕೂಲಿಗಾಗಿನ ಅವರ ಹೋರಾಟವನ್ನು ಅಮಾನುಷವಾಗಿ ಸದೆ ಬಡೆಯುವುದಲ್ಲದೆ, ತೀವ್ರಗಾಮಿತ್ವದ ಸುಳ್ಳು ಕತೆಗಳನ್ನು ಅಥವಾ ಜಾತಿಗಲಭೆಗಳೆಂದು ಬಣ್ಣ ಬಳಿಯಲಾಗುತ್ತದೆ.

ಸಿ. ಐ. ಟಿ. ಯು. ವಿನ ಪ್ರಧಾನ ಪಾತ್ರ

ಬೆಳೆಯುತ್ತಿರುವ ಕೈಗಾರಿಕಾ ಅಶಕ್ತತೆ

ಕೈಗಾರಿಕೆಗಳಲ್ಲಿ ಅಶಕ್ತತೆ ಬೆಳೆಯುತ್ತಿದೆ. 1979 ಡಿಸೆಂಬರ್‌ಗೆ ಕೊನೆಕೊಂಡ ಅವಧಿಗೆ ಭಾರತೀಯ ರಿಸರ್ವ್ ಬ್ಯಾಂಕ್ 389 ದೊಡ್ಡ ಘಟಕಗಳ ಕೈಗಾರಿಕಾ ಅಶಕ್ತತೆ ಕುರಿತಂತೆ ನಡೆಸಿದ ಆಳವಾದ ಅಧ್ಯಯನವು ಹೊರಗೆಡವಿದ ಅಂಶವೆಂದರೆ; ಬಹುತೇಕ ಘಟಕಗಳ ಆಡಳಿತ ವ್ಯವಸ್ಥೆಯಲ್ಲಿ ಕುಂದುಕೊರತೆಗಳಿವೆ, ನಿಧಿಯನ್ನು ಬೇರೆಡೆಗೆ ವರ್ಗಾಯಿಸುತ್ತಿದ್ದಾರೆ. ಮಾರುಕಟ್ಟೆ ಕುರಿತಂತೆ ನಿಚ್ಚಳವಾದ ಯೋಜನೆಯಿಲ್ಲದಿರುವುದು ಮತ್ತು ಕಂಪನಿಯ ಅಧಿಕಾರವನ್ನು ಹಿಡಿಯಲು ವಿವಿಧ ಹಿತಾಸಕ್ತಿಗಳ ನಡುವಿನ ಕಿತ್ತಾಟ. ಇಂತಹ ಅಶಕ್ತ ಮಧ್ಯಮ ಮತ್ತು ಸಣ್ಣ ಪ್ರಮಾಣದ ಘಟಕಗಳ ಸಂಖ್ಯೆಯು 1980 ಜೂನ್ ಕೊನೆಯ ಹೊತ್ತಿಗೆ ಅನುಕ್ರಮವಾಗಿ 1026 ಮತ್ತು 22325 ಆಗಿತ್ತು. 1980 ಡಿಸೆಂಬರ್ ಕೊನೆಯ ಹೊತ್ತಿಗೆ ಸಣ್ಣ ಘಟಕಗಳ ಸಂಖ್ಯೆ 23255ಕ್ಕೆ ಏರಿತು. (ಎಕನಾಮಿಕ್ ಸರ್ವೆ 1981–82, ಪುಟ 21) ಸರ್ಕಾರವು ಹಲವಾರು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರೂ ಕೈಗಾರಿಕೆಯಲ್ಲಿ ಅಶಕ್ತತೆ ಹೆಚ್ಚುತ್ತಿದೆಯೆಂದು ವರದಿ ತಿಳಿಸುತ್ತದೆ.

1982–83ರ ಆರ್ಥಿಕ ಸಮೀಕ್ಷೆಯಲ್ಲಿ ದುರ್ಬಲ ದೊಡ್ಡ ಘಟಕಗಳ ಸಂಖ್ಯೆ ಮಾರ್ಚ್ 1981ರ ಕೊನೆಗೆ 420 ಮುಟ್ಟಿದೆ. ಮತ್ತು ಅವುಗಳಲ್ಲಿ 329 ಆರ್ಥಿಕವಾಗಿ ವ್ಯಾವಹಾರಿಕವಾಗಿವೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. 42 ಘಟಕಗಳ ಪರಿಸ್ಥಿತಿಯನ್ನು ಕುರಿತಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತಿದೆ. ಇವುಗಳಲ್ಲಿ ಎಷ್ಟು ಘಟಕಗಳು ಏಕಸ್ವಾಮ್ಯ ಮನೆತನಗಳಿಗೆ ಸೇರಿವೆ ಎಂದು ಕೇಳಲು ಸರ್ಕಾರ ಹಿಂಜರಿಯುತ್ತಿದೆ. ಅಂತೆಯೇ ಮಧ್ಯಮ ಮತ್ತು ಸಣ್ಣ ಪ್ರಮಾಣದ ಅಶಕ್ತ ಘಟಕಗಳ ಸಂಖ್ಯೆಯನ್ನೂ ನೀಡಿಲ್ಲ. ಅವುಗಳಲ್ಲಿ ಎಷ್ಟನ್ನು ಮುಚ್ಚಲಾಗಿದೆ, ಇದರಿಂದ ಎಷ್ಟು ಕಾರ್ಮಿಕರಿಗೆ ತೊಂದರೆಯಾಗಿದೆ ಮತ್ತು ಅಂತಹ ಕಾರ್ಮಿಕರುಗಳಿಗೆ ಸಹಾಯ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಇವುಗಳ ಬಗ್ಗೆ ತಿಳಿಸಿಲ್ಲ.

ಕೇಂದ್ರೀಯ ಪ್ರಾವಿಡೆಂಟ್ ಕಮೀಷನರ್‌ರವರ 28ನೇ ವಾರ್ಷಿಕ (1981–82) ವರದಿಯನ್ನು ನೋಡಿದರೆ ಕಾರ್ಮಿಕರ ದುರವಸ್ಥೆ ಅರ್ಥವಾಗುತ್ತದೆ. ಪ್ರಾವಿಡೆಂಡ್ ಸಂಬಂಧದಲ್ಲಿ ಮಾಲೀಕರು ಠೇವಣಿ ಮಾಡಬೇಕಾದ 50 ಕೋಟಿ ರೂಪಾಯಿಗಳಲ್ಲಿ 17.65 ಕೋಟಿ ರೂ. ಗಳು ಮುಚ್ಚಲಿರುವ ಅಥವಾ ದಿವಾಳಿಯಾಗಲಿರುವ ಘಟಕಗಳಿಗೆ ಸಂಬಂಧಿಸಿದೆ.

ಹೊಸ ತಂತ್ರಗಳನ್ನು ರೂಪಿಸಬೇಕಾಗಿದೆ

ಪ್ರಸ್ತುತ ಬಿಕ್ಕಟ್ಟಿನ ವಿಭಿನ್ನ ಪರಿಸ್ಥಿತಿಗಳ ವಿರುದ್ಧವಾದ ನಿಮ್ಮ ಹೋರಾಟದ ಅನುಭವವನ್ನು ನಿರೂಪಿಸಬೇಕಾಗಿದೆ. ಆಗ ಅದು ಒಟ್ಟು ಸಂಘಟನೆಯ ಸ್ವತ್ತಾಗುತ್ತದೆ. ಅಸಂಖ್ಯಾತ ಹೋರಾಟಗಳ ಮೂಲಕ ಪಡೆದ ಸಮೃದ್ಧ ಅನುಭವವನ್ನು ಸರಿಯಾಗಿ ವಿಶ್ಲೇಷಿಸಿದಾಗ ಪರಿಸ್ಥಿತಿಯ ಬೆಳವಣಿಗೆಯನ್ನು ಅಧ್ಯಯನ ಮಾಡಲು ಸಹಕಾರಿಯಾಗುವುದಲ್ಲದೆ, ನಿರ್ದಿಷ್ಟ ಪರಿಸ್ಥಿತಿಯನ್ನು ಎದುರಿಸಲು ನಿರ್ದಿಷ್ಟ ಕ್ರಮ ಕೈಗೊಳ್ಳುವುದು ಸಾಧ್ಯವಾಗುತ್ತದೆ.

ಶ್ರಮಜೀವಿ ಜನತೆಯ ಮತ್ತಿತರ ವಿಭಾಗಗಳ ಸಹಕಾರದೊಂದಿಗೆ ದುಡಿಯುವ ವರ್ಗದ ಐಕ್ಯ ಹೋರಾಟವು ಮೂಲ ತಂತ್ರವಾದರೂ ಬದಲಾದ ಮತ್ತು ಆಳುವ ವರ್ಗಗಳ ವಿಭಿನ್ನ ರೀತಿಯ ಧಾಳಿಗಳನ್ನು ಎದುರಿಸಲು ನಾವು ಹೊಸ ತಂತ್ರಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಚರ್ಚಿಸಬೇಕಾಗಿದೆ. ಅಲ್ಲದೆ ಆರ್ಥಿಕ ಬಿಕ್ಕಟ್ಟಿನ ಎಲ್ಲ ಹೊರೆಯನ್ನು ದುಡಿಯುವ ಮತ್ತು ಶ್ರಮಜೀವಿ ವರ್ಗದ ಮೇಲೆ ಹೇರಲು ಯತ್ನಿಸಲಾಗುತ್ತಿದೆ.

ಐಕ್ಯ ಪ್ರತಿರೋಧದ ಬೆಳವಣಿಗೆ

ಸಿ.ಐ.ಟಿ.ಯು. ಸ್ಥಾಪನಾ ಸಮ್ಮೇಳನದಲ್ಲಿ 'ಐಕ್ಯ ಹೋರಾಟಕ್ಕೆ ಮುನ್ನಡೆಯಿರಿ' ಎಂಬ ಘೋಷಣೆಯನ್ನು ಕೊಟ್ಟಿದ್ದೆವು. ಕಾರ್ಮಿಕ ಹಿತಾಸಕ್ತಿಗಳನ್ನು ರಚಿಸಲು ಮತ್ತು ಹೋರಾಟದ ವಿಚಾರವನ್ನು ಎತ್ತಿಹಿಡಿಯಲು ನಾವು ಐಕ್ಯತೆಯನ್ನು ಬಯಸುತ್ತೇವೆ; ಐಕ್ಯತೆಯ ಹೆಸರಿನಲ್ಲಿ ಸಮಯಸಾಧಕರ ಜೊತೆ ಪಾಮಿಲಾಗುವುದಿಲ್ಲ. ದುಡಿಯುವ ವರ್ಗದ ಜಂಟೀ ಕಾರ್ಯಕ್ರಮಗಳು ಮತ್ತು ಕಾರ್ಮಿಕ ಸಂಘಗಳ ಐಕ್ಯತೆಗೆ ಹೋರಾಟಗಳು, ಕಾರ್ಮಿಕ ಸಂಘದಿಂದಾಚೆಗೂ ಅರ್ಥಗರ್ಭಿತವಾಗಿದೆ ಎಂಬುದನ್ನು ಈಗಾಗಲೇ ಹೇಳಿದ್ದೇವೆ. ಬೂರ್ಜ್ವಾಭೂಮಾಲಿಕ ಆಡಳಿತವು ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ವರ್ಗಾಯಿಸುವುದರ ವಿರುದ್ಧ ಹೋರಾಡಲು ಕಾರ್ಮಿಕರ ಮತ್ತು ನೌಕರರ ಸಂಘಗಳ ಚಳುವಳಿಯು ಅತ್ಯಂತ ಸುಸಂಘಟಿತ ಶಕ್ತಿಯಾಗಿದೆ. ಈ ಪ್ರತಿರೋಧದಿಂದಾಗಿ ಬೇರೆ ಇನ್ನಿತರ ವಿಭಾಗಗಳೂ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಸ್ಫೂರ್ತಿ ಪಡೆಯುತ್ತವೆ. ಆಳುವ ವರ್ಗದ ನೀತಿಯಿಂದಾಗಿ ಉಂಟಾಗಿರುವ ಆರ್ಥಿಕ ಅಸಮಾಧಾನತೆಯನ್ನು ಆಳುವ ವರ್ಗ ಮತ್ತು ಅವರ ಏಜೆಂಟರುಗಳು ಜನರ ಗಮನವನ್ನು ಬೇರೆಡೆಗೆ ಉಪಯೋಗಿಸಿಕೊಳ್ಳುವ ಸಾಧ್ಯತೆ ಇದೆ. ಆಳುವ ಮತ್ತು ಅಧಿಕಾರಶಾಹಿ ಸರ್ವಾಧಿಕಾರ ಹಿಂದಿರುಗಿ ಬಾರದಂತೆ ವಿರೋಧಿಸುವ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೂ ಒಂದುಗೂಡಲು ಸುಘಟಿತ ಕಾರ್ಮಿಕರ ಐಕ್ಯ ಪ್ರತಿರೋಧ ನೆಲೆ ಒದಗಿಸಬಹುದು.

ಈ ಹಿನ್ನೆಲೆಯಲ್ಲಿ ಸಿ.ಐ.ಟಿ.ಯು. 4ನೇ ಸಮ್ಮೇಳನ ವೇದಿಕೆಯಿಂದ ಎಲ್ಲ ಕಾರ್ಮಿಕ ಸಂಘ ಮತ್ತು ಫೆಡರೇಷನ್‌ಗಳು ಸೇರಿ ಒಂದು ಮಹಾ ಒಕ್ಕೂಟವನ್ನು ರಚಿಸುವಂತೆ ಕರೆ ನೀಡಲಾಯಿತು.

ರೈತಾಪಿ ಜನಗಳ ಹೋರಾಟ

ಕಾರ್ಮಿಕರ ಚಟುವಟಿಕೆಗಳು ಮತ್ತು ಸರ್ಕಾರದ ನೀತಿಗಳು ರೈತರ ಮತ್ತು ಕೃಷಿ ಕೂಲಿಗಾರರ ಮೇಲೆ ಪರಿಣಾಮ ಬೀರಿವೆ. ತಮ್ಮ ಬೆಳೆಗಳಿಗೆ ಸರಿಯಾದ ಬೆಲೆ ಪಡೆದುಕೊಳ್ಳಲು ಮತ್ತು ಕೂಲಿಯ ಹೆಚ್ಚಳಕ್ಕಾಗಿ ಅವರುಗಳು ಸಾಮೂಹಿಕವಾಗಿ ಚಲಿಸಲು ಪ್ರಾರಂಭಿಸಿದರು. ರೈತರುಗಳು ಕೃಷಿ ಕೂಲಿಗಾರರ ಬೇಡಿಕೆಯನ್ನು ಒಪ್ಪಿಕೊಂಡಿದ್ದರಿಂದಾಗಿ, ಚಳುವಳಿಗೆ ಹೊಸ ಚೈತನ್ಯ ದೊರಕಿತು. ಅನೇಕ ರೈತರ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳಿಂದ ನವದೆಹಲಿಯ ಬೋಟ್ ಕ್ಲಬ್‌ನಲ್ಲಿ ಮಾರ್ಚ್ 26, 1981 ರಂದು ನಡೆದ ರೈತರ ಮತ್ತು ಕೃಷಿ ಕೂಲಿಗಾರರ ಐಕ್ಯ ರ್ಯಾಲಿಯು ಅನೇಕ ರೀತಿಯಲ್ಲಿ ಅಪೂರ್ವವಾಗಿತ್ತು.

ದೆಹಲಿಯ ಮತ್ತು ಸುತ್ತಮುತ್ತಲಿನ ಬಹುಸಂಖ್ಯಾತ ಕಾರ್ಮಿಕರು ಕೆಲಸವನ್ನು ನಿಲ್ಲಿಸಿ ರ್ಯಾಲಿಯನ್ನು ಸೇರಿದ್ದೊಂದು ಸ್ವಾಗತಾರ್ಹ ಅಂಶವಾಗಿತ್ತು. ಶ್ರಮಜೀವಿಗಳೆಲ್ಲರ ಐಕ್ಯ ಕಾರ್ಯಾಚರಣೆಯ ಸಾಧ್ಯತೆಯ ಪ್ರದರ್ಶನ ಇದಾಗಿತ್ತು. ಶ್ರಮಜೀವಿಗಳೆಲ್ಲರ ಹೋರಾಟವು ಸಮಾನವಾದುದೆಂಬ ತಿಳುವಳಿಕೆ ಬರುವುದರ ಪ್ರಾರಂಭ ಇದಾಗಿದೆ. ಬೊಂಬಾಯಿ ಸಮಾವೇಶದ ಯಶಸ್ಸಿನ ಮೇಲೆ ಈ ಬೃಹತ್ ರ್ಯಾಲಿಯು ಪರಿಣಾಮ ಬೀರಿದೆ.

ಜನವರಿ ೧೯ರ ಮುಷ್ಕರ

ಜನವರಿ 19, 1981 ನಮ್ಮ ದೇಶದ ಕಾರ್ಮಿಕ ಸಂಘ ಚಳುವಳಿಯ ಚರಿತ್ರೆಯಲ್ಲಿ ಮರೆಯಲಾಗದ ದಿನವಾಗಿದೆ. ಪ್ರಥಮ ಬಾರಿಗೆ, ಕಾರ್ಮಿಕ ಸಂಘಗಳ ಸಾಮಾನ್ಯ ಬೇಡಿಕೆಗಳನ್ನು ಮೀರಿದ ಮೂಲಭೂತ ಸಮಸ್ಯೆಗಳನ್ನು ಕುರಿತಂತೆ ದೇಶದ ಕಾರ್ಮಿಕ ವರ್ಗವು ಪ್ರತಿಭಟನಾ ಮುಷ್ಕರವನ್ನು ನಡೆಸಿತು. ಪರಿಣಾಮ ಜನತೆಯ ಇನ್ನಿತರ ವಿಭಾಗಗಳು ಇದರಲ್ಲಿ ಭಾಗವಹಿಸುವಂತೆ ಸ್ಫೂರ್ತಿ ನೀಡಿತು. ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳಗಳಲ್ಲಿ ಅಂದು ಬಂದ್ ಆಚರಿಸಲಾಯಿತು. ಅನೇಕ ರಾಜ್ಯಗಳಲ್ಲಿ ಕೈಗಾರಿಕಾ ಕೇಂದ್ರಗಳಲ್ಲಿ ನಗರ ಪಟ್ಟಣಗಳಲ್ಲಿ ಮುಷ್ಕರ ಬಂಧ್‌ನ ರೂಪ ಪಡೆಯಿತು. ಬ್ಯಾಂಕ್ ಮತ್ತು ಜೀವ ವಿಮಾ ಕಛೇರಿಗಳು ದೇಶದಾದ್ಯಂತ ಮುಚ್ಚಲ್ಪಟ್ಟವು. ಸೌಹಾರ್ದತೆಯ ಪ್ರತೀಕವಾಗಿ ರಾಜ್ಯ ಸರ್ಕಾರಗಳ- ಬಹುತೇಕ ನೌಕರರು, ಸುಮಾರು 9 ಲಕ್ಷ ಮುಷ್ಕರದಲ್ಲಿ ಪಾಲ್ಗೊಂಡರು. ಗಣನೀಯ ಅಂಶವೆಂದರೆ ಮುಷ್ಕರದಲ್ಲಿ ಕೃಷಿ ಕೂಲಿಗಾರರು ಪಾಲ್ಗೊಂಡಿದ್ದು. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ತಮಿಳುನಾಡಿನಲ್ಲಿ ಅವರಲ್ಲಿ ಕೆಲವರು ಜೀವವನ್ನೇ ತೆತ್ತರು. ದುಡಿಯುವ ವರ್ಗದ ಐಕ್ಯತೆಯ ವಿರಾಟದರ್ಶನ ಆದಾಗಿದ್ದು ಈ ಪ್ರಕ್ರಿಯೆಯಲ್ಲಿ ಶ್ರಮಜೀವಿಗಳ ಇನ್ನಿತರ ವಿಭಾಗಗಳನ್ನೂ ತನ್ನೊಳಗೆ ಸೆಳೆದುಕೊಂಡಿತು.

ಪರಾಮರ್ಶೆ

ಆದರೂ ಗಮನಿಸಬೇಕಾದ ಅಂಶವೆಂದರೆ ಇಲಾಖೆಗಳ ಮೂಲಕ ನಡೆಸಲ್ಪಡುವ ಕೈಗಾರಿಕಾ ಉದ್ದಿಮೆಗಳಾದ ರೇಲ್ವೆ, ಅಂಚೆ ಮತ್ತು ತಂತಿ ಇಲಾಖೆ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಳ್ಳಲಿಲ್ಲ. ಮುಷ್ಕರದ ಕರೆಗೆ ಬೆಂಬಲ ನೀಡಿದ್ದರೂ ರೈಲ್ವೇ ಕಾರ್ಮಿಕರ ನಾಯಕರುಗಳು ಈ ಮೊದಲೇ ತಮ್ಮ ಅನಿಶ್ಚತೆಯನ್ನು ಅಧೈರ್ಯವನ್ನು ವ್ಯಕ್ತಪಡಿಸಿದ್ದರು. ಐಕ್ಯ ಹೋರಾಟವು ಗರಿಗೆದರಿಕೊಂಡಂತೆ ಈ ಅನಿಶ್ಚತೆಯ ಮಾಯವಾಗಬಹುದೆಂದು ಎನ್. ಸಿ. ಸಿ. ಯೋಚಿಸಿತ್ತು. ಇವುಗಳ ನಾಯಕರನ್ನು ಭೇಟಿ ಮಾಡಲು ವಿಶೇಷ ಕ್ರಮಗಳನ್ನು ಕೈಗೊಂಡಿತು. ಆದರೂ ಮುಖ್ಯ ಪ್ರವಾಹದೊಂದಿಗೆ ಇವರುಗಳನ್ನು ತರುವ ಪ್ರಯತ್ನ ಯಶಸ್ವಿಯಾಗಲಿಲ್ಲ. ಅಂತಹ ದೊಡ್ಡ ವಿಭಾಗದ ಕಾರ್ಮಿಕರು ಮುಖ್ಯ ಪ್ರವಾಹದೊಂದಿಗೆ ಸೇರಲು ಅದರ ನಾಯಕತ್ವದ ನಿರಾಕರಣೆ, "ಸರ್ವರಿಗೂ ಬೋನಸ್, ಮುಂದೂಡಲಾದ ವೇತನ ಬೋನಸ್" ಎಂಬ ತತ್ವಬದ್ಧ ನೀತಿಯಿಂದ ದೂರ ಹೋದುದು ಉತ್ಪಾದಕತೆಗೆ ಜಂಟೀ ಹಾಕಿದ ಬೋನಸ್, ಮತ್ತು ಅಲ್ಪ ಆದರೆ ತತ್‌ಕ್ಷಣದ ಅನುಕೂಲಗಳಿಗಾಗಿ ಕೊಡಬೇಕಾದ ಬಾಕಿಯನ್ನು ಮುಂದೂಡಲಾದ ಬಟವಾಡೆ ಎಂದು ಒಪ್ಪಿಕೊಂಡಿದ್ದರಿಂದಾಗಿ ಕೇವಲ ದೇಶವ್ಯಾಪಿ ಕಾರ್ಮಿಕ ಚಳುವಳಿಗೆ ಕೈಕೊಟ್ಟಿದಲ್ಲದೆ ಅವರಿಗೂ ಭಾರೀ ಪೆಟ್ಟುಬಿದ್ದಿದೆ. ಈ ತಪ್ಪಿನ ಮನವರಿಕೆ ಅನುಭವದಿಂದ ಖಂಡಿತಾ ಆಗುತ್ತದೆ.

ಇವೆಲ್ಲ ಏನನ್ನೂ ಸೂಚಿಸುತ್ತವೆ ? ಕಾರ್ಮಿಕ ಸಂಘದ ಐಕ್ಯತೆ ಮತ್ತು ಐಕ್ಯ ಹೋರಾಟಗಳ ಉತ್ಸಾಹದಿಂದಾಗಿ ಸುಧಾರಣಾವಾದಿ ಕೋಟೆಗಳು ಅಲ್ಲಾಡುತ್ತಿವೆ.

ಇಂದಿನ ಅವಶ್ಯಕತೆಯಾದ ಇನ್ನೂ ಹೆಚ್ಚಿನ ಐಕ್ಯತೆಯನ್ನು ಮನಗಂಡು ಸಿ. ಐ. ಟಿ. ಯು. ಕೇಂದ್ರ ಕಾರ್ಮಿಕ ಸಂಘಗಳ ಮತ್ತು ಫೆಡರೇಶನ್‌ಗಳ ಮಹಾ ಒಕ್ಕೂಟದ ಕರೆಯನ್ನು ಪುನರುಚ್ಚಿಸಬೇಕಾಗಿದೆ. ಕಾರ್ಮಿಕ ಚಳುವಳಿಯು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತಂತೆ ನಿರಂತರ ಚರ್ಚೆಯ ವೇದಿಕೆಯಾಗಿ ಈ ಒಕ್ಕೂಟ ಕೆಲಸ ಮಾಡುತ್ತದಲ್ಲದೆ ನೀತಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಒಮ್ಮತದಿಂದ ತೆಗೆದುಕೊಳ್ಳಲಾಗುತ್ತಿದೆ. ನಿರಂತರ ಚರ್ಚೆ ಮತ್ತು ಸಾಮೂಹಿಕ ಕಾರ್ಯಕ್ರಮಗಳ ಮೂಲಕವೇ ಮಾತ್ರ ಅಪೇಕ್ಷಿತ ಐಕ್ಯತೆಯನ್ನು ಸಾಧಿಸಬಹುದಾಗಿದೆ.

ಸ್ವತಂತ್ರ ಚಟುವಟಿಕೆ

ಸಂಯುಕ್ತ ರಂಗದ ಚಟುವಟಿಕೆಗಳ ಯಶಸ್ಸು ಬಹಳ ಮಟ್ಟಿಗೆ ನಮ್ಮ ಸ್ವತಂತ್ರ ಚಟುವಟಿಕೆ, ನಮ್ಮ ಶಕ್ತಿ ಮತ್ತು ನಮ್ಮ ಕಠಿಣವಲ್ಲದ ನಿಲುವುಗಳನ್ನು ಅವಲಂಬಿಸಿರುವುದೆಂದು ಸಿ.ಐ.ಟಿ.ಯು. ಯಾವಾಗಲೂ ಒತ್ತಿ ಹೇಳುತ್ತಿದೆ.

ನಮ್ಮ ಶಕ್ತಿಯನ್ನು ಕ್ರೋಢಿಕರಿಸಲು ಸೆಣಬು, ಕಲ್ಲಿದ್ದಲು, ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಮೂರು ಫೆಡರೇಶನ್‌ಗಳನ್ನು ರಚಿಸಲಾಗಿದೆ. ಕಲ್ಲಿದ್ದಲು ಕಾರ್ಮಿಕರ ಬೇಡಿಕೆಗಳಿಗೆ ಹೋರಾಡಲು ಅಖಿಲ ಭಾರತ ಕಲ್ಲಿದ್ದಲು ಕೆಲಸಗಾರರ ಫೆಡರೇಶನ್ ಒಂದು ಪ್ರಮುಖ ಅಸ್ತ್ರವಾಗಿದೆ. ಅಂತೆಯೇ ಉಕ್ಕು ಕೆಲಸಗಾರರ ಫೆಡರೇಶನ್ ರಚನೆಯೂ ಪರಿಣಾಮಕಾರಿಯಾಗಿದೆ. ಉಕ್ಕು ಮತ್ತು ಕಲ್ಲಿದ್ದಲು ಆಧುನಿಕ ಕೈಗಾರಿಕೆಯಲ್ಲಿ ಪ್ರಮುಖ ಪಾತ್ರ ಪಡೆದಿದೆ. ಚಳುವಳಿಯು ಮುಂದೆ ಹೋಗಲು ಈ ಎರಡು ಫೆಡರೇಶನ್‌ಗಳ ಉದಯ ಬಹಳ ಸಹಕಾರಿಯಾಗಿದೆ. ಉಕ್ಕು ಕಾರ್ಖಾನೆಯಲ್ಲಿ ಫೆಡರೇಶನ್ ಅತ್ಯಂತ ಕೆಳಮಟ್ಟದ ವಿಭಾಗದ ಕೆಲಸಗಾರರ — ಕಂಟ್ರಾಕ್ಟ್ ಕಾರ್ಮಿಕರು ಬೇಡಿಕೆಯನ್ನು ಪಡೆಯಲು ಸಾಧ್ಯವಾಗಿದೆ. ದುರ್ಗಾಪುರ ಮತ್ತು ಬರ್ನಪುರದಲ್ಲಿನ ಮುಷ್ಕರದಿಂದಾಗಿ ಕಾಂಟ್ರಾಕ್ಟ್ ಕಾರ್ಮಿಕರಿಗೆ ಕೆಲವು ಪರಿಹಾರಗಳನ್ನು ಪಡೆಯಲು ಸಾಧ್ಯವಾಗಿದೆ. ಅವರಲ್ಲಿ ಸ್ವಲ್ಪ ಜನರನ್ನು ಕೆಲಸಗಾರರೆಂದು ತೆಗೆದುಕೊಳ್ಳಲಾಗಿದೆ.

ಸೆಣಬು ಕಾರ್ಖಾನೆಯಲ್ಲಿ ಫೆಡರೇಶನ್ ರಚನೆಯೂ ಕೂಡ ಪ್ರಮುಖ ಬೆಳವಣಿಗೆಯಾಗಿದೆ. ಸೆಣಬು ಕೆಲಸಗಾರರ ಸಮಸ್ಯೆಯನ್ನು ತೆಗೆದುಕೊಳ್ಳುವುದಲ್ಲದೆ ಸೆಣಬು ಬೆಳೆಗಾರರ ಬೇಡಿಕೆಗಳನ್ನು ಫೆಡರೇಶನ್ ತೆಗೆದುಕೊಂಡಿದೆ. ಮತ್ತು ಸೆಣಬು ದೊರೆಗಳು ಲೂಟಿ ಹೊಡೆಯುತ್ತಿರುವುದನ್ನು ಸಾರ್ವಜನಿಕರಿಗೆ ತಿಳಿಸುತ್ತಿದೆ.

(6ನೇ ಪುಟ ನೋಡಿ)

ಬೆಂಗಳೂರು

ಆಟೋ ಚಾಲಕರ ಪ್ರದರ್ಶನ

ದಿನಾಂಕ 28-4-83ರ ಬೆಳಿಗ್ಗೆ 11 ಘಂಟೆಗೆ ಆಟೋರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾ। ಎ. ವಿ. ರಮೇಶ್‌ರವರ ನೇತೃತ್ವದಲ್ಲಿ ಸಂಘದ ನೂರಾರು ಸದಸ್ಯರು ನಗರದ ಜಯನಗರದಲ್ಲಿರುವ ಪ್ರಾದೇಶಿಕ ಸಾರಿಗೆ ಕಛೇರಿ ಮುಂದೆ ಆಟೋರಿಕ್ಷಾ ಚಾಲಕರ ಬೇಡಿಕೆಗಳನ್ನು ಒತ್ತಾಯಿಸಿ ಪ್ರದರ್ಶನ ನಡೆಸಿದರು.

ಆರ್. ಟಿ. ಓ. ಆಟೋರಿಕ್ಷಾ ಚಾಲಕರ ಸಂಘಕ್ಕೆ ಮಾನ್ಯತೆ ಕೊಡಬೇಕು ಮತ್ತು ಆಟೋರಿಕ್ಷಾಗಳಿಗೆ ಯಾವುದೇ ಹೊಸ ಕಾಯಿದೆ ಮತ್ತು ನೀತಿಯನ್ನು ಜಾರಿಗೊಳಿಸುವ ಮೊದಲು ಸಂಘದ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿ ತೀರ್ಮಾನಿಸಿದ ಮೇಲೆ ಜಾರಿಗೆ ತರಬೇಕು. ಪರ್ಮಿಟ್, ಲೈಸನ್ಸ್ ನವೀಕರಣದ ಮತ್ತು ಎಫ್. ಸಿ. ಮಾಡುವಾಗ ರಾಷ್ಟ್ರೀಯ ಉಳಿತಾಯ ಯೋಜನೆಯ ನೂರಾರು ರೂಪಾಯಿಗಳ ಪತ್ರ ಪಡೆಯಬೇಕೆಂದು ಕಡ್ಡಾಯಗೊಳಿಸುವುದನ್ನು ಬಿಡಬೇಕು. ಭ್ರಷ್ಟ ಆರ್. ಟಿ. ಓ. ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬಿತ್ಯಾದಿ ಹತ್ತು ಅಂಶಗಳ ಬೇಡಿಕೆಗಳನ್ನು ಒತ್ತಾಯಿಸಿ ಪ್ರದರ್ಶನ ನಡೆಸಲಾಯಿತು.

ಈ ಅನಿರೀಕ್ಷಿತ ಪ್ರದರ್ಶನದಿಂದ ಕಂಗಾಲಾದ ಆರ್. ಟಿ. ಓ. ಅಧಿಕಾರಿ ವರ್ಗದವರು ಸಂಘದ ಮುಖಂಡರನ್ನು ಮಾತುಕತೆಗೆ ಆಹ್ವಾನಿಸಿದರು. ಕಾ। ಎ. ವಿ. ರಮೇಶ್, ಕಾ। ಬಿ. ಕೆ. ನಾಗರಾಜ್ ಮತ್ತು ಇಬ್ಬರು ಸದಸ್ಯರನ್ನೊಳಗೊಂಡ ನಿಯೋಗದೊಡನೆ ಮಾತುಕತೆ ನಡೆಸಿದ ಆರ್. ಟಿ. ಅಧಿಕಾರಿಗಳು ಸಂಘದ ಬೇಡಿಕೆಗಳು ನ್ಯಾಯಸಮ್ಮತವಾಗಿದೆಯೆಂದೂ ಬಗೆಹರಿಸುವ ಭರವಸೆಗಳನ್ನು ನೀಡಿದ ನಂತರ 15 ದಿವಸದ ಅವಧಿಯನ್ನು ಕೊಟ್ಟು ಸಂಘವು ತಪ್ಪಿದಲ್ಲಿ ತೀವ್ರವಾದ ಹೋರಾಟಕ್ಕೆ ಚಾಲಕರು ಇಳಿಯುವುದಾಗಿ ಅಧಿಕಾರಿಗಳಿಗೆ ತಿಳಿಸಿದೆ.

ಹೆಗಡೆಯವರಿಗೆ ಸಿ.ಪಿ.ಐ.(ಎಂ) ಬೆಂಬಲ

ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಿಧಾನಸಭೆ ಉಪ ಚುನಾವಣೆಯಲ್ಲಿ ಕನಕಪುರದಿಂದ ಸ್ಪರ್ಧಿಸುತ್ತಿದ್ದು, ಹೆಗಡೆಯವರ ವಿಜಯಕೋಸ್ಕರ ಎಲ್ಲಾ ಪಾರ್ಟಿ ಘಟಕಗಳೂ, ರೈತ ಸಂಘದ ಕಾರ್ಯಕರ್ತರೂ ಆಸ್ಥೆಯಿಂದ ಕೆಲಸ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಕರೆಕೊಟ್ಟಿದೆ. ಪಾರ್ಟಿ ಮತ್ತು ರೈತ ಸಂಘದ ನೇತೃತ್ವದಲ್ಲಿ ಪ್ರಚಾರ ಸಭೆಗಳನ್ನೇರ್ಪಡಿಸಲೂ ನಿರ್ಣಯಿಸಿದೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಜನತಾ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡುತ್ತಿರುವಾಗ, ಬಿ.ಜೆ.ಪಿ.ಯಂಥ ಜಾತೀಯ ಪಕ್ಷದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಯಲಬುರ್ಗಿ ಸ್ಥಾನವನ್ನು ಆ ಪಕ್ಷಕ್ಕೆ ಬಿಟ್ಟುಕೊಟ್ಟಿರುವುದು ಸರಿಯಲ್ಲವೆಂದೂ ಇದರಿಂದ ಜಾತೀಯ ಶಕ್ತಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯ ಪಾರ್ಟಿ ವ್ಯಕ್ತ ಮಾಡಿದೆ. ಬಿ.ಜೆ.ಪಿ.ಯ ಬೆದರಿಕೆಗೆ ಮಣಿಯುವುದರಿಂದ ಜನತಾ ಪಾರ್ಟಿ ತನ್ನ ನಿಲುವೆಯನ್ನ ಕಡೆಗಣಿಸಿದಂತಾಗುತ್ತದೆ. ಇದು ಪ್ರಜಾಪ್ರಭುತ್ವ ಬೆಳವಣಿಗೆಗೆ ಅಪಾಯಕಾರಿಯೂ ಸಹ ಎಂದು ಹೇಳಲಿಚ್ಛಿಸುತ್ತದೆ.

ಮಾರ್ಕ್ಸ್ ಕುರಿತು ವಿಚಾರ ಸಂಕಿರಣ

(3ನೇ ಪುಟದಿಂದ)

ಪ್ರೊ. ಸಣ್ಣಗುಡ್ಡಯ್ಯ, ಸರ್ಕಾರಿ ಕಾಲೇಜು, ತುಮಕೂರು. ಪ್ರೊ. ಲಿಂಗದೇವರು ಹಳೆಮನೆ, ಭಾರತೀಯ ಭಾಷಾ ಸಂಸ್ಥೆ, ಪ್ರೊ. ವೀರಣ್ಣ, ಬೆಂಗಳೂರು ವಿಶ್ವವಿದ್ಯಾಲಯ. ಪ್ರೊ॥ ಟಿ. ಪಿ. ಅಶೋಕ, ಲಾಲ್ ಬಹದ್ದೂರ್‌ಶಾಸ್ತ್ರಿ ಕಾಲೇಜ್, ಸಾಗರ. ಶ್ರೀ ರಂಜಾನ್ ದರ್ಗಾ ಮತ್ತು ಶ್ರೀ ರಾಮಚಂದ್ರದೇವ, ಬೆಂಗಳೂರು. ಶ್ರೀ ಜಿ. ರಾಜಶೇಖರ, ಉಡುಪಿ. ಪ್ರೊ. ಗುಂಡ್ಮಿ ಭಾಸ್ಕರಮಯ್ಯ, ವಿವೇಕ ಕಾಲೇಜು, ಕುಂದಾಪುರ. ಶ್ರೀ ಎಂ. ಕೆ. ಭಟ್, ರೈತ ಸಂಘ, ಸುಳ್ಯ. ಶ್ರೀ ಪಿ. ರಾಮಚಂದ್ರರಾವ್, ವಿಧಾನ ಸಭಾ ಸದಸ್ಯ, ಸಿ. ಪಿ. ಐ. ಎಂ. ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಮತ್ತು ಇತರರಿಗೆ ಈಗಾಗಲೇ ಆಹ್ವಾನಿಸಿದ್ದೇವೆ. ಕೆಲವೇ ದಿನಗಳಲ್ಲಿ ಕಾರ್ಯಕ್ರಮದ ಇನ್ನಷ್ಟು ವಿವರಗಳನ್ನು ವಿಶೇಷ ಕರಪತ್ರಗಳ ಮೂಲಕ ತಿಳಿಸಲಾಗುವುದು. ಮೇ 14 ಮತ್ತು 15 ರಂದು ಮಾರ್ಕ್ಸ್‌ವಾದಿ ಸಾಹಿತ್ಯದ ಪ್ರದರ್ಶನ ಮಾರಾಟದ ವ್ಯವಸ್ಥೆಯನ್ನೂ ಮಾಡಲಾಗುವುದು.

ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರತಿ ಒಬ್ಬರೂ ರೂ. 3-00 ಕೊಟ್ಟು ಬಹು ಸಂಖ್ಯೆಯಲ್ಲಿ ಪ್ರತಿನಿಧಿಗಳಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿ ವಿನಂತಿ. ಅವರಿಗೆ ಕಾಫಿ, ಊಟದ ವ್ಯವಸ್ಥೆ ಮಾಡಲಾಗುವುದು. ಕಾರ್ಯಕ್ರಮ ಆರ್ಥಿಕವಾಗಿ ಯಶಸ್ವಿಯಾಗಲು ಉದಾರ ಧನ ಸಹಾಯ ಪಡೆಯಲು ಸಹಕರಿಸಬೇಕಾಗಿ ವಿನಂತಿ.

ದಕ್ಷಿಣ ಕನ್ನಡ:

ಹೋರಾಟ ಸಮಿತಿಯ ರಚನೆ

ಕರ್ನಾಟಕ ಪ್ರಾಂತ ರೈತ ಸಂಘದ ದ. ಕ. ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕು ಘಟಕಗಳ ಮುಂದಾಳುಗಳ ಮತ್ತು ಕಾರ್ಯಕಾರ್ಯಕರ್ತರುಗಳ ಜಂಟೀ ಸಭೆಯು 23-4-83 ರಂದು ಕಾ। ಸೂರ್ಯನಾರಾಯಣ ಭಟ್ ಅವರ ಅಧ್ಯಕ್ಷತೆಯಲ್ಲಿ ಪುತ್ತೂರಿನಲ್ಲಿ ನಡೆಯಿತು. ಈ ಮೂರು ತಾಲ್ಲೂಕುಗಳಲ್ಲಿ ಹಳ್ಳಿಯಿಂದ ಹಳ್ಳಿಗೆ ಕಾಲ್ನಡೆ ಜಾತಾದಲ್ಲಿ ಹೋಗಿ ಸಮಸ್ಯೆಗಳ ಅಧ್ಯಯನ ನಡೆಸಿ ಬಂದಿರುವ ಸಿ. ಪಿ. ಐ. (ಎಂ.) ರಾಜ್ಯ ಸಮಿತಿ ಸದಸ್ಯ ಹಾಗೂ ರೈತ ಸಂಘದ ಮುಂದಾಳು ಕಾ। ಎಂ. ಕೆ. ಭಟ್ ಅವರು ಪರಿಸ್ಥಿತಿಯ ವಿವರಣೆ ಕೊಟ್ಟರು. ರಾಜ್ಯದಲ್ಲಿ ಇತ್ತೀಚೆಗೆ ಅಧಿಕಾರಕ್ಕೆ ಬಂದಿರುವ ಜನತಾ ಪಕ್ಷದ ಸರ್ಕಾರಕ್ಕೆ ಹಳ್ಳಿಯ ಬಡವರು ಮತ್ತು ರೈತರಿಗೆ ಸಂಬಂಧಿಸಿದ ನಲವತ್ತು ಬೇಡಿಕೆಗಳ ಮನವಿಯನ್ನು ಕೊಟ್ಟು ಕೊಟ್ಟು ಎರಡು ತಿಂಗಳಾಗುತ್ತಾ ಬಂದರೂ ಈ ಬೇಡಿಕೆಗಳನ್ನು ಈಡೇರಿಸುವತ್ತ ಸರ್ಕಾರ ಗಂಭೀರ ಯೋಚನೆ ಮಾಡುತ್ತಿಲ್ಲ. ಆದುದರಿಂದ ತುರ್ತು ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟದ ಮೂಲಕ ರಾಜ್ಯ ಸರಕಾರದ ಮೇಲೆ ಒತ್ತಾಯ ಹೇರಬೇಕಾಗಿದೆ ಎಂದ ಎಂ. ಕೆ. ಅವರು ಈ ಪ್ರದೇಶದ ಹಳ್ಳಿಯ ಬಡಜನರೂ, ರೈತರೂ ಪ್ರಬಲ ಚಳುವಳಿಗಳನ್ನು ನಡೆಸಲು ಕರೆ ಇತ್ತರು. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿಗಳೂ ಮತ್ತು ಸಿ.ಪಿ.ಐ.(ಎಂ.) ಮುಂದಾಳು ಕಾ। ಯು. ಜನಾರ್ದನ ನಾಯಕ್ ಅವರು ಮಾತನಾಡುತ್ತಾ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ಪ್ರದೇಶಗಳಲ್ಲಿ ನಡೆಸಲು ಯೋಚಿಸುತ್ತಿರುವ ಹೋರಾಟಕ್ಕೆ ಜಿಲ್ಲೆಯಾದ್ಯಂತ ಬೆಂಬಲ ನೀಡುವ ಭರವಸೆಯನ್ನಿತ್ತರು. ಸಭೆಗೆ ಬಂದಿದ್ದ ಹಲವಾರು ಮಂದಿ ಸೂಕ್ತ ಸಲಹೆಗಳನ್ನಿತ್ತರು.

ಮುಖ್ಯವಾಗಿ ಸರಕಾರಿ ಸ್ಥಳಗಳಲ್ಲಿ ವಾಸಿಸುತ್ತಿರುವ ಹಲವಾರು ಮಂದಿ ಬಡಜನರಿಗೆ ಭೂಮಿಯನ್ನು ಖಾಯಂಗೊಳಿಸುವಂತೆಯೂ, ಅವರಿಗೆ ಉಚಿತವಾಗಿ ಹಕ್ಕು ಪತ್ರ ಕೊಡುವಂತೆಯೂ ಸರ್ಕಾರವನ್ನು ಒತ್ತಾಯಿಸಲು ಮತ್ತು ಬಡರೈತರ ಹಾಗೂ ಕೃಷಿ ಕೆಲಸಗಾರರ ಸಾಲದ ಮತ್ತು ಕೂಲಿಯ ಪ್ರಶ್ನೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಕಾರ್ಯಕ್ರಮವನ್ನು ರೂಪಿಸಲು ಕಾ। ಎಂ. ಕೆ. ಅಧ್ಯಕ್ಷತೆಯಲ್ಲಿ ಮೂವತ್ತು ಮಂದಿ ಸದಸ್ಯರಿರುವ ಹೋರಾಟ ಸಮಿತಿಯನ್ನು ಸಭೆಯು ಆಯ್ಕೆ ಮಾಡಿತು. ಸಮಿತಿಯ ಇತರ ಪದಾಧಿಕಾರಿಗಳಾಗಿ ಕಾ। ಬಿ. ರಾಮಕೃಷ್ಣ (ಉಪಾಧ್ಯಕ್ಷ), ಸೂರ್ಯನಾರಾಯಣ ಭಟ್ (ಖಜಾಂಚಿ), ಮೋನಪ್ಪಗೌಡ, (ಸುಳ್ಯ) ವಿಲ್‌ಫ್ರೆಡ್ ಡಿ'ಸೋಜ (ಪುತ್ತೂರು), ಬಿ. ವಿಷ್ಣುಮೂರ್ತಿ (ಬೆಳ್ತಂಗಡಿ) ಇವರುಗಳು ತಾಲ್ಲೂಕು ಸಂಚಾಲಕರುಗಳನ್ನಾಗಿಯೂ ಆಯ್ಕೆ ಮಾಡಲಾಯಿತು. ಬೆಲೆ ಏರಿಕೆಯನ್ನು ಹತೋಟಿಗೆ ತರಲು ತುರ್ತು ಕ್ರಮ ವಹಿಸುವಂತೆಯೂ, ಈ ಪ್ರದೇಶದಲ್ಲಿ ಕ್ಷಾಮದ ಪರಿಸ್ಥಿತಿಯುಂಟಾಗುತ್ತಿರುವುದರಿಂದ ಪರಿಹಾರ ಕ್ರಮ ಕೈಗೊಳ್ಳುವಂತೆಯೂ ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಭೆ ಕೈಗೊಂಡಿತು.

ದೇಶದ ಕಾರ್ಮಿಕರ ಚಳುವಳಿಯಲ್ಲಿ ಸಿ.ಐ.ಟಿ.ಯು. ವಿನ ಪ್ರಧಾನ ಪಾತ್ರ

(5ನೇ ಪುಟದಿಂದ)

ದಬ್ಬಾಳಿಕೆ

ಕಳೆದ ನಾಲ್ಕು ವರ್ಷಗಳಲ್ಲಿ ದೇಶದಾದ್ಯಂತ ಸಿ.ಐ.ಟಿ.ಯು. ಸಕ್ರಿಯ ಕಾರ್ಯಕರ್ತರು ಅದಮ್ಯವಾದ ದಬ್ಬಾಳಿಕೆಯ ಎದುರಿನಲ್ಲಿ ಮುನ್ನಡೆದಿದ್ದಾರೆ. ಈ ಹೋರಾಟಗಳಲ್ಲಿ ನಾವು ಅನೇಕ ಸಂಗಾತಿಗಳನ್ನು ಕಳೆದುಕೊಂಡಿದ್ದೇವೆ. ನಮ್ಮ ಮಹಿಳಾ ಕಾರ್ಯಕರ್ತರನ್ನು ಮತ್ತು ಕಾರ್ಮಿಕರನ್ನು ಹನ್ಸಿ (ಹರ್ಯಾಣ) ಮತ್ತು ಅಸ್ಸಾಮಿನ ಕೃಷ್ಣಾಕಾಳಿ ಎಸ್ಟೇಟ್‌ನಲ್ಲಿ ಅಮಾನುಷವಾಗಿ ಥಳಿಸಲಾಗಿದೆ. ಅಂತಹ ದಬ್ಬಾಳಿಕೆಯ ನಡುವೆಯೂ ಸಿ.ಐ.ಟಿ.ಯು. ಧ್ವಜವನ್ನು ಎತ್ತಿಹಿಡಿದಿರುವ ನಮ್ಮ ಸಂಗಾತಿಗಳ ಬಗ್ಗೆ ಹೆಮ್ಮೆ ಎನಿಸುತ್ತಿದೆ.

ನಮ್ಮ ದೇಶದ ಸಾಮಾಜಿಕ ಸ್ಥಿತ್ಯಂತರಕ್ಕಾಗಿ ಜನತೆಗೆ ನಾಯಕತ್ವವನ್ನು ನೀಡುವ ಮತ್ತು ಮುಂದೆ ನಡೆಸಿಕೊಂಡು ಹೋಗುವ ಹೊಣೆಯನ್ನು ಚರಿತ್ರೆಯು ದುಡಿಯುವ ವರ್ಗದ ಹೆಗಲುಗಳ ಮೇಲೇರಿಸಿದೆ; ಈ ಪ್ರಕ್ರಿಯೆಯಲ್ಲಿ ನಾವು ಇನ್ನೂ ಹೆಚ್ಚು ತ್ಯಾಗ ಬಲಿದಾನಗಳನ್ನು ಮಾಡಬೇಕಾಗುತ್ತದೆ. ನಮ್ಮ ವೀರ ಹುತಾತ್ಮರು ಯಾವ ಉದ್ದೇಶಕ್ಕಾಗಿ ತಮ್ಮ ಪ್ರಾಣವನ್ನು ತೆತ್ತರೋ ಅದರ ಸಾಧನೆಗೆ ನಾವು ಹೇಗೆ ಮುಂದೆ ಹೋಗಬೇಕೆಂಬುದನ್ನು ಚರ್ಚಿಸೋಣ. ಈ ಧೀರ ಕಾರ್ಮಿಕರಿಗೆ ಅದೇ ಸರಿಯಾದ ಗೌರವಾರ್ಪಣೆಯಾಗುತ್ತದೆ.

ವಿದೇಶಗಳ ಭ್ರಾತೃ ಸಂಘಟನೆಗಳೊಂದಿಗಿನ ಸಂಬಂಧ

ನಮ್ಮ ತತ್ವಬದ್ಧ ಹೋರಾಟ, ಆಳುವ ವರ್ಗ ಮತ್ತು ಅದರ ಸರಕಾರದ ಎಲ್ಲ ಧಾಳಿಗಳ ವಿರುದ್ಧವೂ ನಮ್ಮ ಶಕ್ತಿ, ಕಾರ್ಮಿಕ ಅಂತರರಾಷ್ಟ್ರೀಯ ತತ್ವಕ್ಕೆ ಮೀಸಲಾದ ನಮ್ಮ ಕರ್ತವ್ಯ ನಿರತೆ, ಇವುಗಳಿಂದಾಗಿ ವಿದೇಶಗಳ ಹಲವಾರು ಸಂಘಟನೆಗಳೊಡನೆ ಭ್ರಾತೃ ಸಂಬಂಧಗಳು ಲಭಿಸಿವೆ.

ವರದಿಯನ್ನು ಮುಗಿಸುವುದಕ್ಕೆ ಮುನ್ನ ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ದೇಶದ ಇತರ ಭಾಗಗಳಲ್ಲಿನ ಭೀಕರ ಬರಗಾಲದೆಡೆಗೆ ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಸಹೋದರರು ಕ್ಷಾಮದ ದವಡೆಗೆ ಸಿಲುಕಿದ್ದಾರೆ. ಕುಡಿಯುವ ನೀರೂ ಇಲ್ಲದೆ ತಮಿಳುನಾಡಿನ ಪರಿಸ್ಥಿತಿ ಭಯಂಕರವಾಗಿದೆ. ಈ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಕೇವಲ ಭಾರತ ಸರ್ಕಾರದೊಡನೆ ಇದ್ದರೂ, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಮತ್ತು ದುಡಿಯುವ ವರ್ಗದ ಸಂಗಾತಿಗಳು ಪರಿಸ್ಥಿತಿಗೆ ಓಗೊಟ್ಟಿದ್ದಾರೆ. ನರಳುತ್ತಿರುವ ರೈತಾಪಿ ಜನಗಳ ಸಹಾಯಕ್ಕೆ ದೇಶಾದ್ಯಂತ ದುಡಿಯುವವರ್ಗ ಮುಂದೆ ಬರಬೇಕಾಗಿದೆ. ನಮ್ಮ ಮುಂದಿರುವ ತುರ್ತು ಹೊಣೆಗಳಲ್ಲಿ ಇದೊಂದಾಗಿದೆ.

ಎಲ್ಲ ಕ್ಷೇತ್ರಗಳಲ್ಲೂ ಅತ್ಯಲ್ಪ ಕಡಿಮೆ ಸಮಯದಲ್ಲಿ ಸಮಾಜವಾದಿ ದೇಶಗಳು ಅಸಾಧಾರಣ ಪ್ರಗತಿ ಸಾಧಿಸಿವೆ. ವ್ಯವಸ್ಥೆಯಲ್ಲಿನ ಅಂತರ್ಗತ ವೈರುಧ್ಯಗಳಿಂದಾಗಿ ಬಂಡವಾಳಶಾಹಿ ಜಗತ್ತು ಅತ್ಯಂತ ಭೀಕರ ಬಿಕ್ಕಟ್ಟಿಗೆ ಒಳಗಾಗಿದ್ದು ಮಿಲಿಯಾಂತರ ಜನಗಳು ನಿರುದ್ಯೋಗಿಗಳಾಗಿ ಮತ್ತು ಬೆಲೆಗಳು ಏರುತ್ತಿರುವಾಗ ಸಮಾಜವಾದಿ ದೇಶಗಳು ಈ ಎಲ್ಲಾ ಹಾವಳಿಗಳಿಂದ ಮುಕ್ತವಾಗಿರುವುದು ಸಮಾಜವಾದಿ ವ್ಯವಸ್ಥೆಯ ಮೇಲ್ಮೆಗೆ ಸಾಕ್ಷಿಯಾಗಿದೆ. ಸಮಾಜವಾದಿ ವ್ಯವಸ್ಥೆಯನ್ನು ನಾಶಗೊಳಿಸಲು ಅಣುಯುದ್ಧವನ್ನು ಸಾರುವ ತೀವ್ರ ಸಿದ್ಧತೆಗಳನ್ನೊಳಗೊಂಡಂತೆ ಸಾಮ್ರಾಜ್ಯಶಾಹಿಗಳು ಒಡ್ಡುತ್ತಿರುವ ಎಲ್ಲ ಅಡೆತಡೆಗಳ ವಿರುದ್ಧವೂ ಮಾನವ ಕುಲವು ಅನಿವಾರ್ಯವಾಗಿ ಆ ಗುರಿಯತ್ತ ಚಲಿಸುತ್ತಿದೆ.

ಈ ವೀರೋಚಿತ ಹೋರಾಟಗಳಿಂದ ಸ್ಫೂರ್ತಿಯನ್ನು ಪಡೆಯೋಣ ಮತ್ತು ಮಾನವನಿಂದ ಮಾನವ ಶೋಷಣೆಯು ಗತಕಾಲದ ಸಂಗತಿಯಾಗುವ ಹೊಸ ಸಾಮಾಜಿಕ ವ್ಯವಸ್ಥೆಯೆಡೆಗೆ ನಮ್ಮ ಸಮಸ್ತ ಜನತೆಯ ವಿಜಯೋತ್ಸಾಹದ ಯಾತ್ರೆಯ ನೇತೃತ್ವವನ್ನು ದುಡಿಯುವ ವರ್ಗ ವಹಿಸುವಂತೆ ನಮ್ಮ ದೇಶದಲ್ಲೂ ಹೋರಾಟವನ್ನು ಮುಂತೆಗೆದುಕೊಂಡು ಹೋಗೋಣ.

ಕೊಂಡುಕೊಳ್ಳುವ ಹೆಂಡಂದಿರು - ಜೀವಂತ ಕತೆ

-ಎನ್ಕೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು 35 ವರ್ಷ ಕಳೆಯಿತು. ವೈಜ್ಞಾನಿಕ ಸಂಶೋಧನೆಗಳು ತೀವ್ರ ಗತಿಯಿಂದ ಮುಂದೆ ಸಾಗಿದೆ. ಇಡೀ ಜಗತ್ತನ್ನೇ ನಿರ್ನಾಮಗೊಳಿಸುವ ಅಣು ಅಸ್ತ್ರಗಳು ತಯಾರಾಗಿ ನಿಂತಿವೆ. ಆದರೆ ಜಗತ್ತಿನ, ಹಾಗೆಯೇ ಭಾರತ ದೇಶದ ಹಲವಾರು ಗ್ರಾಮಾಂತರ ಗುಡ್ಡಗಾಡು ಪ್ರದೇಶಗಳಲ್ಲಿ ನಾಗರೀಕತೆ ಎಂಬುದೇ ಇಲ್ಲ, ಆಧುನೀಕತೆಯಿಲ್ಲ. ಇನ್ನೂ ಪಾಳೆಯಗಾರಿ ಪದ್ಧತಿಯ ವ್ಯವಸ್ಥೆ ಇದ್ದಂತೆ ಕಂಡು ಬರುತ್ತದೆ. ಅಂಥ ಪ್ರದೇಶದಲ್ಲಿ ತರುಣಿಯರನ್ನು ಕಾಮ ಪಿಪಾಸೆಯನ್ನು ತಣಿಸುವುದಕ್ಕಾಗಿ ಪಶುಗಳಂತೆ ಉಪಯೋಗಿಸಿ ದಾರಿಯಲ್ಲಿ ಬಿಸಾಡಿ ಬಿಡುವ ದಾರುಣ ಕತೆಗಳಲ್ಲೊಂದನ್ನು ಇಲ್ಲಿ ವಿವರಿಸಲಾಗಿದೆ.

ಒರಿಸ್ಸಾ ರಾಜ್ಯದಲ್ಲಿ ಗುಮ್‌ಸಾರ ಉದಯಗಿರಿ ಎಂಬ ಚಿಕ್ಕ ಹಳ್ಳಿ. ಜನಸಂಖ್ಯೆ 8000. ಇಲ್ಲಿ ಹೆಚ್ಚಾಗಿ ಆದಿವಾಸಿಗಳೂ ಹರಿಜನರೇ ಜಾಸ್ತಿ. ನೈಸರ್ಗಿಕ ದೃಷ್ಟಿಯಿಂದ ಉದಯಗಿರಿ ಅತಿ ಸುಂದರ ಹಳ್ಳಿ. ಒರಿಸ್ಸಾದ ಕಾಶ್ಮೀರವೆಂದೂ ಇದನ್ನು ಕರೆಯುತ್ತಾರೆ. ಹವಾಮಾನ ದೃಷ್ಟಿಯಿಂದ ಮತ್ತು ಹಸಿರು ಬಣ್ಣದ ಪ್ರಕೃತಿಯಿಂದಷ್ಟೇ ಉದಯಗಿರಿ ಆಕರ್ಷಕವಾಗಿಲ್ಲ. ಇದರ ಜೊತೆಯಲ್ಲಿ ಗುಮ್‌ಸಾರ ಉದಯಗಿರಿಯ ಸುಂದರ ಮಹಿಳೆಯರು ಅಧಿಕಾರಿಗಳನ್ನೂ, ಕಂಟ್ರಾಕ್ಟರರನ್ನೂ ಆಕರ್ಷಿಸುತ್ತಿದ್ದಾರೆ. ಅಧಿಕಾರಿಗಳೂ, ಕಂಟ್ರಾಕ್ಟರರೂ ಗುಮ್‌ಸಾರ ಉದಯಗಿರಿಗೆ ಬಂದು ಒಂದು "ಹೆಂಡತಿ"ಯನ್ನು ಕೊಂಡುಕೊಳ್ಳುತ್ತಾರೆ. ಆಕೆಯ ಹೆಸರಲ್ಲೊಂದು ಮನೆ ಮಾಡುತ್ತಾರೆ. ಕೆಲವು ತಿಂಗಳು ಆಕೆಯ ಜೊತೆಯಲ್ಲಿ ಸುಖ ಜೀವನ ನಡೆಸುತ್ತಾರೆ. ಕೊನೆಗೊಂದು ದಿವಸ ಆ "ಹೆಂಡತಿ"ಯನ್ನು ಆಕೆಯ ಪಾಡಿಗೆ ಬಿಟ್ಟು, ಮಕ್ಕಳಾಗಿದ್ದರೆ ಆ ಮಕ್ಕಳನ್ನೂ ಪ್ರಕೃತಿಗೆ ದಾನವಾಗಿ ಕೊಟ್ಟು ತಾವು ಕಣ್ಮರೆಯಾಗುತ್ತಾರೆ. ಮತ್ತೊಮ್ಮೆ ಗುಮ್‌ಸಾರ ಉದಯಗಿರಿ ಕಡೆ ಎಂದೂ ದೃಷ್ಟಿ ಹರಿಸುವುದಿಲ್ಲ. ತಮ್ಮ ಪಾದದ ಗುರುತೂ ಆ ಭೂಮಿಯಲ್ಲಿ ಮೂಡಗೊಡುವುದಿಲ್ಲ. ಹೀಗಾಗಿ ಹೊರಗಿನವರಿಂದ ಪ್ರೇಮ ನಗರವೆಂದು ಕರೆಯಲ್ಪಡುವ ಗುಮ್‌ಸಾರ ಉದಯಗಿರಿಯಲ್ಲಿ ನೂರಾರು ಯುವತಿಯರು ತಮ್ಮ ಮಕ್ಕಳೊಂದಿಗೆ ನಿರ್ಗತಿಕರಾಗಿ ಬಾಳುವ, ಅದು ಸಾಧ್ಯವಾಗದಿದ್ದರೆ ತನ್ನ ಇಡೀ ಜೀವನವನ್ನೆ "ಹಣಕ್ಕಾಗಿ ಮೈಮಾರಾಟ ಮಾಡುವ" ಉದ್ಯೋಗಕ್ಕೆ ಇಳಿಯುವ ಪ್ರಸಂಗ ಬಂದಿದೆ. ಈ ರೀತಿ ತಮ್ಮ ಸುಲಿಗೆಯಾಗುತ್ತಿರುವುದರ ಅರಿವು ಮಹಿಳೆಯರಲ್ಲುಂಟಾಗುತ್ತಿದೆ. ಮಾನವ ಕುಲಕ್ಕೇನೇ ಅಪಮಾನಕಾರಕವಾದ ಇಂಥ ಘಟನೆಗಳ ವಿರುದ್ಧ ಹೋರಾಡಲು ತರುಣಿಯರು ಸಿದ್ಧತೆ ನಡೆಸುತ್ತಿದ್ದಾರೆ. ಯುವಕರೂ ಇದಕ್ಕೆ ಬೆಂಬಲಿಸಲು ಮುಂದೆ ಬರುತ್ತಿದ್ದಾರೆ.

"ಆತ ನನ್ನನ್ನು 4 ವರ್ಷದ ಹಿಂದೆ ಮದುವೆಯಾದ, ಮಗು ಹುಟ್ಟುವ ಕೆಲವು ದಿನಗಳ ಮುಂಚೆ ಅಂದರೆ ಮೂರು ವರ್ಷಗಳ ಹಿಂದೆ ನನ್ನನ್ನು ಬಿಟ್ಟು ಹೋದ. ತನಗೆ ಬದ್ಲಿಯಾಗಿದೆ ಎಂದೂ, ಯೋಗ್ಯ ಮನೆ ಸಿಕ್ಕಿದ ಕೂಡಲೇ ಕರೆದುಕೊಂಡು ಹೋಗುವುದಾಗಿಯೂ ಹೇಳಿದ್ದಾನೆ. ಆತ ಇನ್ನೂ ಬರಬೇಕಾಗಿದೆ. ನನಗೆ ಮೋಸ ಆಗಿದೆ. ಏನು ಮಾಡಬೇಕೆಂದು ನನಗೆ ತಿಳಿಯುತ್ತಿಲ್ಲವೆಂದು, 18 ವಯಸ್ಸಿನ ರಾಜಕಿಶೋರಿ ಆಚಾರಿ ಎಂಬ ತರುಣಿಯ ರೋದನ".

ಹರಿಹರ ಸೂತ್ರ ಎಂಬವ ನೀರಾವರಿ ಖಾತೆಯ ಅಧಿಕಾರಿ. ಈ ಕಣಿವೆಗೆ ಬದ್ಲಿಯಾಗಿ ಬಂದ. "ಸ್ಥಳೀಯ ಹೆಂಡತಿ"ಗಾಗಿ ಹುಡುಕಾಡಿದ. ರಾಜಕಿಶೋರಿಯನ್ನು ಕಂಡ, ಆಕೆಯ ತಂದೆ ತಾಯಿಗಳನ್ನು ಭೇಟಿಯಾದ. ಪುರಿಯಲ್ಲಿರುವ ಜಗನ್ನಾಥ ದೇವಸ್ಥಾನದಲ್ಲಿ ಬೇಕಾದರೆ ಮದುವೆಯಾಗುತ್ತೇನೆಂದು ಹೇಳಿದ. ರಾಜಕಿಶೋರಿ ಜೊತೆಯಲ್ಲಿ ಸಂಸಾರ ಮಾಡಿದ. ನಂತರ ಆಕೆಯನ್ನು ಬಿಟ್ಟು ಹೋದ. ಇಂಥ ನೂರಾರು ರಾಜಕಿಶೋರಿಯವರ ಕರುಣಕತೆ ಈ ಪ್ರೇಮನಗರದಲ್ಲಿ ಹುಟ್ಟಿ ಬಂದಿದೆ. ಇನ್ನೂ ಇಂಥ "ಮದುವೆಗಳು" ನಡೆಯುತ್ತಾ ಇವೆ ಎಂದು ನಾರಿ ಸಂಘರ್ಷ ಸಮಿತಿಯ ಕಾರ್ಯದರ್ಶಿ ಸೌದಾಮಿನಿಯ ಹೇಳಿಕೆ. "ಸೌಂದರ್ಯ ಮತ್ತು ಬಡತನ ಎರಡೂ ಸೇರಿದ್ದರಿಂದ" ಈ ರೀತಿ ನಡೆಯುತ್ತಿತ್ತು ಎಂದು ಆಕೆಯು ಕೊಡುವ ಕಾರಣ. "ಶೇ. 90ರಷ್ಟು ಬಡ ಕುಟುಂಬಗಳು ಈ ತರದಲ್ಲಿ ಅಧಿಕಾರಿಗಳಿಂದ, ಮಹಾಜನರಿಂದ ಮತ್ತು ಕಂಟ್ರಾಕ್ಟರಿಂದ ಸುಲಿಯಲ್ಪಡುತ್ತಿವೆ" ಎಂದು ಯುವ ಸಂಘರ್ಷ ಸಮಿತಿಯ ಹೇಮಂತ ನಾಯಕ್ ಅವರ ಹೇಳಿಕೆ.

ಇಷ್ಟು ಸುಲಭವಾಗಿ ಸುಲಿಗೆಗೆ ಬಲಿಯಾಗಲು ಏನು ಕಾರಣ? ಒಂದು ಮದುವೆಯ ವಿಧಾನದಲ್ಲಿ ಎರಡು ಊಟಗಳಿರುತ್ತವೆ. ಸ್ಥಳೀಯ ಭಾಷೆಯಲ್ಲಿ ಕರೆಯಲ್ಪಡುವ "ಸಿದಿತೇ–ಟಕಂಗಾ"ಅಂದರೆ ಮದುಮಗ ತಾನು ಮದುವೆಯಾಗಲಿರುವ ವಧುವಿನ ಮನೆಗೆ ಹೋಗಿ ಮಾತುಕತೆಯ ಹಣವೆಂದು ರೂ. 20–25 ಕೊಡುತ್ತಾನೆ. ಈ ಹಣವನ್ನು ಕುಡಿಯುವುದಕ್ಕೆ ಖರ್ಚು ಮಾಡಲಾಗುವುದು. ಅನಂತರ ಮದುವೆಯ ಸಮಾರಂಭ. ಆಗಲೂ ಮದುಮಗ ಊಟ ನೀಡುತ್ತಾನೆ. ಹೊರಗಿನಿಂದ ಬಂದವರು ಮೊದಲು ಹುಡುಗಿಯರಿಗೆ ನೌಕರಿ ಕೊಡಿಸುತ್ತೇವೆಂದು ಹೇಳುತ್ತಾರೆ. ಅನಂತರ ಅವರ ಕುಟುಂಬದ ವ್ಯವಹಾರದಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಾರೆ. ಹಾಗೆಯೇ ಹೆಚ್ಚು ವಿಶ್ವಾಸಗಳಿಸಲು ಪ್ರಾರಂಭ ಮಾಡುತ್ತಾರೆ. ಹಳ್ಳಿಯ ಸಾದಾ ಜನ ಮತ್ತು ತರುಣಿಯರು ಇದನ್ನೆಲ್ಲ ನಂಬಿ ಮೋಸಕ್ಕೊಳಗಾಗುತ್ತಾರೆ.

ಸುಂದರ ದಟ್ಟವಾದ ಗುಡ್ಡಗಾಡು, ಅರಣ್ಯದಿಂದ ಸುತ್ತುವರಿದ ಈಪ್ರದೇಶ ಆರ್ಥಿಕ–ಸಾಮಾಜಿಕವಾಗಿ ಸಂಪರ್ಕ ಕಳೆದುಕೊಂಡಿರುವುದರಿಂದಲೇ ಇಲ್ಲಿ ವಾಸಿಸುತ್ತಿರುವ ಗುಡ್ಡಗಾಡು ಪ್ರದೇಶದ ಕೊಂಡಾ ಜನ ಹಿಂದುಳಿದವರಾಗಿಯೇ ಉಳಿದಿದ್ದಾರೆ. ಕೆಲವು ವರ್ಷಗಳ ಹಿಂದೆ ಮಹಿಳೆಯರೆಲ್ಲ ಬೆತ್ತಲೆಯಾಗಿಯೇ ತಿರುಗಾಡುತ್ತಿದ್ದರಂತೆ. ಅನಂತರ ಈ ಪ್ರದೇಶದಲ್ಲಿ ಸ್ವಲ್ಪ ಸಂಸ್ಕೃತಿ ಬೆಳೆಯಿತು. ಉದಯಗಿರಿಯ ಮಹಿಳೆಯರಿಂದ ಆಕರ್ಷಿಸಲ್ಪಟ್ಟ ಬ್ರಿಟಿಷರನ್ನೂ ಮರಾಠರನ್ನೂ ಕೊಂಡಾ ಜನರು ಎದುರಿಸಿದರು.

ಈ ತರದಲ್ಲಿ ತಮ್ಮ ಮಹಿಳೆಯರು ಸುಲಭವಾಗಿ ಕಾಮುಕರಿಗೆ ಬಲಿಯಾಗುತ್ತಿರುವುದನ್ನು ಕಂಡು ಬೆದರಿದ ತಂದೆ ತಾಯಿಗಳು ತಮ್ಮ ಹುಡುಗಿಯರ ಸೌಂದರ್ಯ ಕೆಡಿಸುವ ಕಾರ್ಯಕೈಗೊಂಡಿದ್ದಾರೆ. ಸೂಜಿಗಳಿಂದ ಹುಡುಗಿಯರ ಮುಖದ ಮೇಲೆ ಬರೆ ಎಳೆಯುತ್ತಿದ್ದರು. 25–30 ವರ್ಷಗಳ ನಂತರ ಮತ್ತೆ ಈ ಪ್ರದೇಶದಲ್ಲಿ ಕಾಮುಕರ ಹಾವಳಿ ಬೆಳೆಯಿತು. ಕುಡಿತ ಎಲ್ಲವನ್ನೂ ಸರಿಪಡಿಸುತ್ತದೆಂದು ಅಧಿಕಾರಿಗಳು ತಿಳಿದುಕೊಂಡರು. ಅದರಲ್ಲಿ ಯಶಸ್ವಿಯಾದರು.

ಕೊಂಡಾ ಜನಾಂಗಕ್ಕೆ ಕುಡಿತ ಬೇಕು. ಅಧಿಕಾರಿಗಳು ಅವರಿಗೆ ಕುಡಿತದ ವ್ಯವಸ್ಥೆ ಮಾಡುತ್ತಿದ್ದರು. ಕುಡಿತದ ಅಮಲಿನಿಂದಾಗಿ ದೊಡ್ಡವರು ಕೆಲಸಕ್ಕೆ ಹೋಗುತ್ತಿರಲಿಲ್ಲ. ಕಾರಣ ಹುಡುಗಿಯರೇಕೆಲಸಹುಡುಕಿಕೊಂಡು ಹೋಗುತ್ತಿದ್ದರು. ಅಧಿಕಾರಿಗಳ ಬಲೆಯಲ್ಲಿ ಬೀಳುತ್ತಿದ್ದರು. ಪೋಲೀಸರು ಸಹಾಯಕ್ಕೆ ಬರುತ್ತಿರಲಿಲ್ಲ.

ಈ ಪ್ರದೇಶದಲ್ಲಿ ಹೊಸ ಜಾಗೃತಿ ಬೆಳೆದು ಬರುತ್ತಿದೆ. ಈ ತರದಿಂದ ತರುಣಿಯರ ದುರುಪಯೋಗವಾಗುತ್ತಿರುವುದರ ವಿರುದ್ಧ ಪ್ರತಿಭಟನೆ ಪ್ರಾರಂಭವಾಗಿದೆ. ಆದರೆ ಸ್ಥಳೀಯ ಅಧಿಕಾರಿಗಳು ಅಂಥವರ ಮೇಲೆ ಉಗ್ರ ಕ್ರಮ ಕೈಗೊಂಡು ಬೆದರಿಸುತ್ತಿದ್ದಾರೆ. ತನ್ನ ಮಗಳನ್ನು ಒಬ್ಬ ಅಧಿಕಾರಿಗೆ "ಮದುವೆ" ಮಾಡಿಕೊಡಲು ಒಪ್ಪಿಗೆ ಕೊಡದ ಕಾರಣ ಮಹೇಂದ್ರ ನಾಯಕ ಎಂಬವ ನೌಕರಿಯನ್ನು ಕಳೆದುಕೊಳ್ಳಬೇಕಾಯಿತು.

ನಾರಿ ಸಂಘರ್ಷ ಸಮಿತಿ, ಯುವಕ ಸಂಘರ್ಷ ಸಮಿತಿ, ಛಾತ್ರ ಸಂಘರ್ಷ ಸಮಿತಿಗಳೆಲ್ಲ 1981ರಿಂದ ಈ ನೀಚ ಕೃತ್ಯಗಳ ವಿರುದ್ಧ ಬಂಡೆದ್ದಿದ್ದಾರೆ. ಮನವಿ ಪತ್ರಗಳನ್ನು ಅರ್ಪಿಸುತ್ತಿರುವುದಷ್ಟೇ ಅಲ್ಲದೆ, ಗುಡ್ಡಗಾಡು ಪ್ರದೇಶದ ಮಹಿಳೆಯರು ತಮ್ಮ ಸುಲಿಗೆಯ ವಿರುದ್ಧ, ತಮ್ಮ ದಾರುಣ ಪರಿಸ್ಥಿತಿಯನ್ನು ತೋರ್ಪಡಿಸಲು ಫೆಬ್ರವರಿ 1982ರಂದು ಒರಿಸ್ಸಾ ವಿಧಾನ ಸಭೆಯ ಮುಂದೆ ಮತ ಪ್ರದರ್ಶನ ನಡೆಸಿದರು. ಗುಮ್‌ಸಾರ ಉದಯಗಿರಿಯ ಮಹಿಳೆಯರ ಹೃದಯ ಕರಗಿಸುವ ಸುದ್ದಿಗಳು ಉದಯಗಿರಿಯ ಕಂದಕವನ್ನು ದಾಟಿ ಒರಿಸ್ಸಾ ರಾಜ್ಯದಲ್ಲೆಲ್ಲ ಹಬ್ಬಿದೆ. ಮತ ಪ್ರದರ್ಶನ, ಮನವಿಗಳ ಸುರಿಮಳೆ ಎದ್ದಿದ್ದರೂ, ಕಲ್ಲು ದೇವರಿನ್ನೂ ಕಣ್ಣು ತೆರೆದಿಲ್ಲ. ಇಂದಿರಾ ಕಾಂಗ್ರೆಸ್ಸಿನ ಮುಖ್ಯಮಂತ್ರಿಯವರ ಹೃದಯ ಮುಟ್ಟಿಲ್ಲ ಈ ಕೂಗು.

ಇದನ್ನು ಕಂಡ ಕಂಟ್ರಾಕ್ಟರರು, ಅಧಿಕಾರಿಗಳೆಲ್ಲ ತಮ್ಮ ಕಾಮಪಿಪಾಸೆಗೆ ಅಡ್ಡ ಬರುತ್ತಿರುವ ಈ ಚಳುವಳಿಗಾರರನ್ನು ದಮನ ಮಾಡಲು ಹೊಂಚು ಹಾಕಿದ್ದಾರೆ, ಕ್ರಮ ಕೈಗೊಳ್ಳುತ್ತಿದ್ದಾರೆ. ಉದಯಗಿರಿಯಲ್ಲಿ ಒಬ್ಬ ಅಧಿಕಾರಿಯ ವಿರುದ್ಧ ಉಪವಾಸ ಸತ್ಯಾಗ್ರಹ ಕೈಗೊಂಡಾಗ, ಆ ಅಧಿಕಾರಿ ಆ ಚಳುವಳಿಯ ಮುಖಂಡನ ತಮ್ಮನನ್ನು ಸುಳ್ಳು ಆರೋಪದಿಂದ

(ಎಂಟನೇ ಪುಟ ನೋಡಿ)

ಪಂಚಾಯತ್ ಚುನಾವಣೆಗೆ ಸಿದ್ಧವಾಗುತ್ತಿರುವ ಪಶ್ಚಿಮಬಂಗಾಳ

(ಹಿಂದನೇ ಪುಟದಿಂದ)

ದಿನಗಳನ್ನು ಉತ್ಪಾದಿಸಲು ಬಳಸಿಕೊಳ್ಳಲಾಗಿತ್ತು.

1978ರ ಜೂನ್‌ನಲ್ಲಿ ಪಂಚಾಯತ್‌ಗಳ ಸ್ಥಾಪನೆಯಾದ ನಂತರ ಮಾರ್ಚ್ 1981ರವರೆಗಿನ ಅವಧಿಯಲ್ಲಿ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಅಂದರೆ 15 ಕೋಟಿ ಮಾನವ ದಿನಗಳನ್ನು ಕೂಲಿಗಾಗಿ ಕಾಳು ಯೋಜನೆಯಲ್ಲಿ ಉತ್ಪಾದಿಸಲಾಗಿತ್ತು. ಈಗ ಬಂಗಾಳದ ಗ್ರಾಮಗಳನ್ನು ಬರಗಾಲ ಅತ್ಯಂತ ತೀವ್ರವಾಗಿ ಆವರಿಸಿಕೊಂಡು ಬರುತ್ತಿದೆ. ಪಂಚಾಯತ್ತುಗಳು ಅತ್ಯಂತ ಪರಿಣಾಮಕಾರೀ ರೀತಿಯಲ್ಲಿ ಜನತೆಗೆ ನೆರವಾಗುತ್ತಿವೆ. ಇದರ ನೆರವಿನಿಂದಾಗಿಯೇ ಎರಡೂವರೆಲಕ್ಷ ಎಕರೆ ಭೂಮಿಯನ್ನು ನೀರಾವರಿಗೆ ಅಳವಡಿಸಲಾಗಿದೆ.

ಕಳೆದ ವರ್ಷದ ಡಿಸೆಂಬರ್‌ನವರೆಗೆ ಏಳೂವರೆ ಲಕ್ಷ ಎಕರೆ ಭೂಮಿಯನ್ನು 14 ಲಕ್ಷ ಗ್ರಾಮೀಣ ಬಡವರಿಗೆ ಹಂಚಲಾಗಿದೆ. 12 ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಬರ್ಗಾದಾರರು ಪಂಚಾಯತ್ ನೆರವಿನಿಂದ ನೋಂದಾಯಿಸಲ್ಪಟ್ಟಿದ್ದಾರೆ, ಮನೆಯಿಲ್ಲದವರಿಗಾಗಿ 83,000 ಮನೆಗಳನ್ನು ಕಟ್ಟಲಾಗಿದೆ, 7,252 ಬಾವಿಗಳನ್ನು ತೋಡಿಸಲಾಗಿದೆ, 71,309 ಕಿ.ಮೀ. ರಸ್ತೆಯನ್ನು ನಿರ್ಮಿಸಲಾಗಿದೆ, 1,062 ರಸ್ತೆಯಡಿಯ ಕಾಲುವೆಗಳನ್ನೂ ಮತ್ತು 4,600 ಶಾಲೆಗಳನ್ನೂ ನಿರ್ಮಿಸಲಾಗಿದೆ. ಅಲ್ಲದೆ ಪಂಚಾಯತ್‌ನ ನೆರವಿನಿಂದ 2,61,000 ಮಂದಿ ವಯಸ್ಕ ಶಿಕ್ಷಣ ಕೇಂದ್ರಗಳ ಮೂಲಕ ಶಿಕ್ಷಣ ಪಡೆದಿದ್ದಾರೆ.

ಇವೆಲ್ಲವುಗಳ ಜೊತೆಗೆ ಪಂಚಾಯತ್ತುಗಳು ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ, ಮೀನುಗಾರಿಕೆಯಲ್ಲಿ, ಗುಡ್ಡಗಾಡು ಜನರ ಕುರಿತು ಯಶಸ್ವಿಯಾಗಿ ತಮ್ಮ ಪಾತ್ರಗಳನ್ನು ನಿರ್ವಹಿಸಿವೆ. ಇವೆಲ್ಲವೂ ಒಂದುಗೂಡಿ ಹಳ್ಳಿಗಳಲ್ಲಿ ಒಂದು ಹೊಸ ಬದುಕನ್ನು, ಚಟುವಟಿಕೆಯನ್ನು ಸೃಷ್ಟಿಸಿದೆ.

ಕೇಂದ್ರದಿಂದ ಅಡ್ಡಿ :

ಪಂಚಾಯತ್ತುಗಳ ಈ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು ತನ್ನ ಅಸಹಕಾರದ ಧೋರಣೆಯ ಮೂಲಕ ತಡೆ ಹಿಡಿಯುತ್ತಿದೆ. ರಾಜ್ಯ ಸರ್ಕಾರದ ಅತ್ಯಂತ ನ್ಯಾಯಯುತ ಬೇಡಿಕೆಗಳನ್ನೂ ಸಹ ಅದು ನಿರಾಕರಿಸುತ್ತಾ ಬರುತ್ತಿದೆ. ಭಾರತ ಸರ್ಕಾರ ಪಂಚಾಯತ್ ಚಳವಳಿಯನ್ನು ನಿಷ್ಕ್ರಿಯಗೊಳಿಸಲು ಹವಣಿಸುತ್ತಿದೆ. ಬರಗಾಲದ ಪ್ರಥಮ ಭಾಗದಲ್ಲಿ ರಾಜ್ಯ ಸರ್ಕಾರದ 74.18 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಲ್ಲಿಸಿತ್ತು ಆದರೆ ಕೇಂದ್ರ ಸರ್ಕಾರ ಮಂಜೂರು ಮಾಡಿದ್ದು ಕೇವಲ 24.77 ಕೋಟಿ ಮಾತ್ರ. ಎರಡನೆಯ ಭಾಗದಲ್ಲಿ 205.39 ಕೋಟಿ ಬೇಡಿಕೆಗೆ 52.50 ಕೋಟಿ ಮಂಜೂರಾಯಿತು. ಅಲ್ಲದೆ ಮೂರು ಕೋಟಿ ರೂಪಾಯಿಗಳನ್ನು ಸಾಲವಾಗಿ ಪರಿಗಣಿಸಲಾಯಿತು.

ಎಲ್ಲಾ ಅಡೆತಡೆಗಳನ್ನೂ ಮೀರಿ ಪ. ಬಂಗಾಲದ ಪಂಚಾಯತ್ತುಗಳು ಅತ್ಯಂತ ವಿಶಾಲ ಪ್ರಮಾಣದಲ್ಲಿ ಮೆಚ್ಚುಗೆಯನ್ನು ಗಳಿಸಿಗೊಂಡಿದೆ. ಮೆಚ್ಚುಗೆ ವ್ಯಕ್ತಪಡಿಸಿರುವ ಸಂಸ್ಥೆ. ವ್ಯಕ್ತಿಗಳೆಂದರೆ I. L. O., ಹೈದರಾಬಾದಿನ ದಿ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವೆಲಪ್‌ಮೆಂಟ್, ಹಿಂದಿನ ಕೇಂದ್ರ ಸಚಿವ ಎಸ್. ಕೆ. ಭೋಲಾ ಪಾಸ್ವಾನ್ ಶಾಸ್ತ್ರಿ ಮುಂತಾದವರು. ನಿಜ ಹೇಳಬೇಕೆಂದರೆ 1978 ರಿಂದಲೂ 15 ಜಿಲ್ಲೆಗಳ ಗ್ರಾಮ ಪಂಚಾಯ್ತಿಗಳು, ಇಲ್ಲಿಯವರೆಗೂ ಕಂಡಿರದಿದ್ದಂತಹ ರೀತಿಯಲ್ಲಿ ಗ್ರಾಮೀಣ ಸಮುದಾಯಕ್ಕೆ ವಿಶಿಷ್ಟ ಸೇವೆ ಸಲ್ಲಿಸಿದೆ.

ಸೀಟುಗಳ ಹಂಚಿಕೆ

1978ರಲ್ಲಿ ಮೂರು ಹಂತಗಳ ಪಂಚಾಯತ್ ಪದ್ಧತಿಯಲ್ಲಿ 55,940 ಸೀಟುಗಳಿದ್ದವು. ಸಿ ಪಿ ಐ (ಎಂ) ಮಾತ್ರವೇ 34,419 ಸ್ಥಾನಗಳನ್ನು ಗಳಿಸಿತು ಮತ್ತು ಎಡರಂಗವು ಒಟ್ಟು 39,519 ಸ್ಥಾನಗಳನ್ನು ಗಳಿಸಿಕೊಂಡಿತು. ಕಾಂಗ್ರೆಸ್ (ಐ), ಜನತಾ ಮತ್ತು ಇತರ ಪಕ್ಷಗಳಿಗೆ ಲಭಿಸಿದ್ದು ಕೇವಲ 16,424 ಸ್ಥಾನಗಳು ಮಾತ್ರ.

ಈ ಸಲದ ಚುನಾವಣೆಯಲ್ಲಿ 55,320 ಸ್ಥಾನಗಳ ಪೈಕಿ 7,000 ಸ್ಥಾನಗಳನ್ನು ಸಿ.ಪಿ.ಐ(ಎಂ) ಅನ್ನು ಬಿಟ್ಟು ರಂಗದ ಉಳಿದ ಪಾಲುದಾರರಿಗೆ ಹಂಚಲಾಗಿದೆ, ಕಳೆದ ಚುನಾವಣೆಯಲ್ಲಿ ಎರಡನೆಯ ಸ್ಥಾನ ಗಳಿಸಿದ್ದ ಪಕ್ಷಗಳಿಗೆ ಈ ಸ್ಥಾನಗಳನ್ನು ಬಿಟ್ಟು ಕೊಡಲಾಗಿದೆ ಅಲ್ಲದೆ ಕಳೆದ ಚುನಾವಣೆಯಲ್ಲಿ ಸಿ.ಪಿ.ಐ.(ಎಂ) ಗೆದ್ದಿದ್ದ ಸ್ಥಾನಗಳಲ್ಲಿ ಕೆಲವನ್ನು ಈ ಪಕ್ಷಗಳಿಗೆ ಬಿಟ್ಟುಕೊಡಲಾಗಿದೆ. ಈ ರೀತಿಯ ಹಂಚಿಕೆಯಿಂದಾಗಿ ಸುಮಾರು ಎಂಟು ಸಾವಿರ ವಿವಾದಾತ್ಮಾಕ ಸ್ಥಾನಗಳಲ್ಲಿನ ಭಿನ್ನಾಭಿಪ್ರಾಯಗಳನ್ನು ತಗ್ಗಿಸಲು ಯಶಸ್ವಿಯಾಗಿದೆ.

ಎಡರಂಗದ ಪ್ರಣಾಳಿಕೆ

ಈ ಸಲದ ಪಂಚಾಯತ್ ಚುನಾವಣೆಗಾಗಿ ಎಡರಂಗವು 12 ಅಂಶಗಳ ಕಾರ್ಯಕ್ರಮವನ್ನೊಳಗೊಂಡ ಚುನಾವಣಾ ಪ್ರಣಾಳಿಕೆಯನ್ನು ಘೋಷಿಸಿದೆ. ಇದರಲ್ಲಿ ಭೂಸುಧಾರಣೆ, ಕೃಷಿ ಅಭಿವೃದ್ಧಿ, ಭೂ ಹಂಚಿಕೆ, ಬೇನಾಮಿ ಭೂಮಿಯ ಸ್ವಾಧೀನ, ಬರ್ಗಾ ನೊಂದಾವಣೆ, ಸಣ್ಣ ರೈತರಿಗೆ ಬ್ಯಾಂಕ್ ಸಾಲ, ಸಣ್ಣ ಪ್ರಮಾಣದ ನೀರಾವರಿ, ಪ್ರಾಥಮಿಕ ಶಿಕ್ಷಣ ಪ್ರಚಾರ, ವಯಸ್ಕ ಶಿಕ್ಷಣ, ಜಾನಪದ ಸಂಸ್ಕೃತಿ, ಪ್ರತಿ ಒಂದು ಸಾವಿರ ಜನರಿಗೆ ಒಬ್ಬ ಸಮುದಾಯ ಆರೋಗ್ಯ ಮಾರ್ಗದರ್ಶಿ, ಪ್ರತಿ ಐದು ಸಾವಿರ ಜನರಿಗೆ ಒಂದು ಆರೋಗ್ಯ ಕೇಂದ್ರ - ಸಣ್ಣ ಕೈಗಾರಿಕೆಗಳ ಅಭಿವೃದ್ಧಿ - ಸಹಕಾರ, ರಸ್ತೆಗಳು ಮತ್ತು ಸಂಪರ್ಕ ಹಿಂದುಳಿದ ಪ್ರದೇಶಗಳಿಗೆ, ಪರಿಶಿಷ್ಟ ಜಾತಿ ಮತ್ತು ಜನಾಂಗಗಳಿಗೆ ವಿಶೇಷ ಯೋಜನೆಗಳು; ಸರಿಯಾದ ಅಭಿವೃದ್ಧಿಗಾಗಿ ಎಲ್ಲಾ ಖಾತೆಗಳ ನಡುವೆ ಸಮನ್ವಯತೆ ಇವು ಪ್ರಣಾಳಿಕೆಯಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು.

ಬಂಟ್ವಾಳ

ರಾಜಕೀಯ ಪ್ರಚಾರ ಜಾಥಾ

ಕೇಂದ್ರ ಸರ್ಕಾರದ ಜನವಿರೋಧಿ ನೀತಿ, ಜನತೆಯನ್ನು ಬಾಧಿಸುವ ಹೊಸ ತೆರಿಗೆಗಳು, ಇದರಿಂದಾಗಿ ಉಂಟಾಗುವ ಬೆಲೆ ಏರಿಕೆ, ಹಣದುಬ್ಬರ, ನಿರುದ್ಯೋಗ ಇತ್ಯಾದಿಗಳಿಂದ ಜನಜೀವನವನ್ನು ಅಸಹನೀಯವನ್ನಾಗಿ ಮಾಡಿದೆ. ಅದೇ ವೇಳೆ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಭಾರೀ ರಿಯಾಯಿತಿಗಳನ್ನು ನೀಡಿದೆ ಎಂಬುದಾಗಿ ದಿನಾಂಕ 27–4–83 ರಂದು ಬಂಟ್ವಾಳ ಬಡ್ಡಿ ಕಟ್ಟೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಿ.ಪಿ.ಐ.(ಎಂ) ದ. ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ। ಕೆ. ಆರ್. ಶ್ರೀಯಾನರು ಹೇಳಿದರು.

ಬಳಿಕ ಸಭೆಯನ್ನುದ್ದೇಶಿಸಿ ಶಾಸಕರಾದ ಕಾ। ಪಿ, ರಾಮಚಂದ್ರರಾಯರು ಮಾತನಾಡುತ್ತಾ, ಕಳೆದ 35 ವರ್ಷಗಳಿಂದ ದೇಶವನ್ನಾಳಿದ ಕಾಂಗ್ರೆಸ್ ಪಕ್ಷದ ನೀತಿಯಿಂದ ಇಂದು ಬಡತನ ಮಿತಿ ಮೀರಿದೆಯೆಂದೂ, ನಮ್ಮ ಬದುಕು ಅಸಹನೀಯವಾದ ಕಾರಣ ಇಂದು ಕಾರ್ಮಿಕರೂ ರೈತರೂ, ನೌಕರರೂ, ಕೃಷಿ ಕೂಲಿಗಾರರೂ ಹೋರಾಟದ ಕಣಕ್ಕೆ ಅನಿವಾರ್ಯವಾಗಿ ಇಳಿಯಬೇಕಾಗಿದೆಯೆಂದು ತಿಳಿಸಿ ಯಾವುದೇ ಬಂಡವಾಳಶಾಹಿಗೆ ಪಕ್ಷಪಾತಿಯಾಗಿರುವ ಸರ್ಕಾರದಿಂದ ದುಡಿಯುವ ಜನತೆಯ ಸಮಸ್ಯೆಗೆ ಪರಿಹಾರ ಸಿಗಬೇಕಾದರೆ ಸಂಘಟಿತರಾಗಿ ಹೋರಾಡುವುದಲ್ಲದೆ ಬೇರೆ ದಾರಿಯಿಲ್ಲವೆಂದೂ ಅದಕ್ಕಾಗಿ ಜನಜಾಗೃತಿಯಾಗಬೇಕೆಂದೂ ಕರೆಯಿತ್ತರು.

ಕರ್ನಾಟಕದಲ್ಲಿ ಕಾಂಗ್ರೆಯನ್ನು ಸೋಲಿಸಿ ಅಧಿಕಾರಕ್ಕೆ ಬಂದಿರುವ ಜನತಾ ಪಕ್ಷದ ಸರ್ಕಾರಕ್ಕೆ ಭಾರೀ ಜವಾಬ್ದಾರಿಯಿದೆಯೆಂದೂ, ಏರುತ್ತಿರುವ ಬೆಲೆಗಳನ್ನು ಇಳಿಸಿ, ಜೀವನಾವಶ್ಯಕ ವಸ್ತುಗಳನ್ನು ನ್ಯಾಯ ಬೆಲೆಯಲ್ಲಿ ವಿತರಣೆ ಮಾಡಿ, ಕ್ಷಾಮವನ್ನೆದುರಿಸುತ್ತಿರುವ ಜನರಿಗೆ ಕುಡಿಯುವ ನೀರನ್ನು ಒದಗಿಸುವ ಕಾರ್ಯವನ್ನು ತುರ್ತಾಗಿ ನಡೆಸಬೇಕೆಂದೂ, ಕೇಂದ್ರ ಸರ್ಕಾರದಿಂದ ಅವಶ್ಯವಿರುವ ಆಹಾರ ಧಾನ್ಯಗಳನ್ನು ಪೂರ್ತಿಯಾಗಿ ಪಡೆಯಲು ಜನತೆಯ ಬೆಂಬಲದಿಂದ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದೂ ಕಾ। ರಾಮಚಂದ್ರರಾವ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ತಾ॥ 24-4-83ರಿಂದ ಬಂಟ್ವಾಳ ತಾಲ್ಲೂಕಿನ ವಿವಿಧ ಪ್ರದೇಶಗಳಲ್ಲಿ ಪಕ್ಷದ ರಾಜಕೀಯ ಪ್ರಚಾರ ಜಾಥಾ ನಡೆಸಿ ತಾ॥ 27ರಂದು ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ। ಬಿ.ಎಚ್. ಬಂಗೇರರು ವಹಿಸಿದ್ದರು. ಆರಂಭದಲ್ಲಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾ। ಬಿ. ಪಾಸಂಗಟ್ಟಿ ಸ್ವಾಗತಿಸಿದರು. ಸಭಾ ಪೂರ್ವದಲ್ಲಿ ಮೆರವಣಿಗೆ ನಡೆಸಲಾಗಿತ್ತು.

ಸುಳ್ಯದಲ್ಲಿ ಪ್ರಚಾರ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾ ಸಮಿತಿಯ ತೀರ್ಮಾನದ ಪ್ರಕಾರ 24-4-83 ರಂದು ಸುಳ್ಯ ಪೇಟೆಯಲ್ಲಿ ಪ್ರಚಾರ ಸಭೆ ಮತ್ತು ಮೆರವಣಿಗೆ ನಡೆಯಿತು. ಸಂಜೆ 5ಕ್ಕೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ। ಎಂ. ಕೆ. ಭಟ್ ವಹಿಸಿದ್ದರು. ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ ಎಂ. ಕೆ. ಅವರು ತುರ್ತು ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರದ ಮೇಲೆ ಒತ್ತಾಯ ತರಬೇಕಾಗಿದೆ ಎಂದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಪಕ್ಷದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ। ಕೆ. ಆರ್. ಶ್ರಿಯಾನ್ ಅವರು ದೇಶದ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತಾ ಕೇಂದ್ರ ಸರ್ಕಾರದ ಧೋರಣೆಗಳು ಜನಸಾಮಾನ್ಯರ ಮೇಲೂ, ದುಡಿಯುವ ವರ್ಗದ ಮೇಲೂ ಇನ್ನೂ ಹೆಚ್ಚಿನ ಹೊರೆಯನ್ನು ಹೊರಿಸುತ್ತಲಿವೆ ಎಂದರು. ರಾಜ್ಯ ಸರಕಾರಗಳಿಗೆ ಹೆಚ್ಚಿನ ಸಂಪನ್ಮೂಲಗಳು ಅವಶ್ಯವೆಂದು ಅವರು ಕಾಂಗ್ರೆಯೇತರ ರಾಜ್ಯ ಸರ್ಕಾರಗಳೂ ಒಂದಾಗಿ ಹೋರಾಡಲು ಮುಂದಾಗಿರುವುದನ್ನು ಸ್ವಾಗತಿಸಿದರು. ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ತಲೆ ಎತ್ತಿರುವುದನ್ನು ಪ್ರಸ್ತಾಪಿಸಿದ ಅವರು ದುಡಿಯುವ ಜನರೆಲ್ಲಾ ಒಂದಾಗಲು ಕರೆ ಇತ್ತರು.

ಬಹಿರಂಗ ಸಭೆಗೆ ಮೊದಲು ನೂರಾರು ಜನ ಕಾರ್ಯಕರ್ತರಿಂದ ಮೆರವಣಿಗೆ ನಡೆಯಿತು. ಪ್ರಾರಂಭದಲ್ಲಿ ಕಾ। ಸೂರ್ಯನಾರಾಯಣಭಟ್ ಸಭೆಯನ್ನು ಸ್ವಾಗತಿಸಿದರು. ಪಕ್ಷದ ತಾಲ್ಲೂಕು ಸಮಿತಿ ಸದಸ್ಯ ಕಾ। ಭಾಸ್ಕರ್ ಧನ್ಯವಾದವನ್ನಿತ್ತರು.

ಜೀವಂತ ಕತೆ

(3ನೇ ಪುಟದಿಂದ)

ಹಿಡಿದುಹಾಕಿ, ಪೋಲೀಸರಿಂದ ಥಳಿಸಿ–ಹೊಡಿಸಿ ಅವನನ್ನು ಜೈಲಿಗಟ್ಟಿದರು. ಎರಡು ತಿಂಗಳ ನಂತರ 1982 ಜೂನ್ 14ರಂದು ಜೈಲಿನಲ್ಲೇ ನನ್ನ ತಮ್ಮ ಸತ್ತಿದ್ದಾನೆಂಬ ಸುದ್ದಿ ಬಂತೆಂದು ಚಳುವಳಿ ಮುಖಂಡ ಹೇಮಂತ ಹೇಳುತ್ತಿದ್ದ. ಪ್ರತಿಭಟನೆ ಮಾಡಿದರೂ ಕೂಡ ಇದರ ಕುರಿತು ಚೌಕಾಶಿ ಆಗಲೇ ಇಲ್ಲವಂತೆ. ಇದೇ ರೀತಿ ಹಲವಾರು ಜನರು ನಿಗೂಢ ರೀತಿಯಲ್ಲಿ ಮೃತ್ಯುವನ್ನಪ್ಪುತ್ತಿದ್ದಾರೆ. ದಬ್ಬಾಳಿಕೆಯ ವಿರುದ್ಧ, ನ್ಯಾಯಕ್ಕಾಗಿ ಹೋರಾಟ ಹೆಚ್ಚಾಗುತ್ತಿದ್ದಂತೆ ಕೊಲೆಗಳು ಜಾಸ್ತಿಯಾಗುತ್ತಿವೆ, ಬಾರು ಅಂಗಡಿಗಳೂ ಹೆಚ್ಚಾಗುತ್ತಿವೆ. ಮಹಿಳೆಯರು ನ್ಯಾಯಕ್ಕಾಗಿ ನಡೆಸುತ್ತಿರುವ ಹೋರಾಟಕ್ಕೆ ಮಾತೆ ಇಂದಿರಾಗಾಂಧಿಯ ಒರಿಸ್ಸಾ ಸರ್ಕಾರ ಗತಿಕೆಟ್ಟ ಮಹಿಳೆಯರಿಗೆ ಕೊಡುತ್ತಿರುವ ದೇಣಿಗೆ ಇದಾಗಿದೆ–ಇನ್ನೂ ಹೆಚ್ಚು ಬಾರು ಅಂಗಡಿಗಳು, ಅತ್ಯಾಚಾರಗಳು, ಕೊಲೆಗಳು.

ಆದರೆ ಉದಯಗಿರಿಯ ಜಾಗೃತ ಮಹಿಳೆಯರೂ, ಯುವಕರೂ ತಮ್ಮ ಚಳುವಳಿಯನ್ನು ತೀವ್ರಗೊಳಿಸುತ್ತಿದ್ದಾರೆ. ಅತ್ಯಾಚಾರ ಕೊನೆಗೊಳಿಸಿಯೇ ತೀರುತ್ತೇವೆಂಬ ದೃಢ ನಿರ್ಧಾರದಿಂದ ಮುನ್ನಡೆಯುತ್ತಿದ್ದಾರೆ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ	ರೂ. 30–00
ಅರ್ಧವಾರ್ಷಿಕ	ರೂ. 15–00

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited. 54/1, K. R. Road, Bangalore-4 Editor : P. RAMACHANDRARAO